ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ವಿಶ್ವ ಸಹಾಯಕ ನಾಯಿಗಳ ದಿನ (Assistance Dog Day) ಅಂಗವಿಕಲರಿಗೆ ಸಹಾಯ ಮಾಡುವ ತರಬೇತಿ ಪಡೆದ ನಾಯಿಗಳ ಸೇವೆಯನ್ನು ಗೌರವಿಸುವ ದಿನ.

2) ರಾಷ್ಟ್ರೀಯ ಚಾಕೊಲೇಟ್ ಚಿಪ್ ಕುಕೀ ದಿನ (National Chocolate Chip Cookie Day)
ಪ್ರತಿ ವರ್ಷ ಆಗಸ್ಟ್ 4 ರಂದು ರಾಷ್ಟ್ರೀಯ ಚಾಕೊಲೇಟ್ ಚಿಪ್ ಕುಕೀ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ವಿಶ್ವದ ಅತ್ಯಂತ ಜನಪ್ರಿಯ ಸಿಹಿ ತಿಂಡಿಗಳಲ್ಲೊಂದಾದ ಚಾಕೊಲೇಟ್ ಚಿಪ್ ಕುಕೀಗೆ ಸಮರ್ಪಿತವಾಗಿದೆ.

3) ವಿಶ್ವ ಸ್ತನ್ಯಪಾನ ವಾರ (World Breastfeeding Week)
ಆಗಸ್ಟ್ 1?7ರವರೆಗೆ ಆಚರಿಸಲಾಗುವ ಈ ವಾರದಲ್ಲಿ ಆಗಸ್ಟ್ 4 ಕೂಡ ಒಳಗೊಂಡಿದೆ. ತಾಯಿಯ ಹಾಲಿನ ಮಹತ್ವದ ಬಗ್ಗೆ ಅರಿವು ಮೂಡಿಸಲಾಗುತ್ತದೆ.

## ಸುಭಾಷಿತ

ವಿದ್ಯಾರ್ಥಿಗಳು ಭತ್ತದ ಚೀಲಗಳಾಗಬಾರದು, ಭತ್ತದ ಗದ್ದೆಗಳಾಗಬೇಕು.

–ಕುವೆಂಪು

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ನಾಟಕೀಯ ಬೆಳವಣಿಗೆಗಳ ಬಳಿಕ
## ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ 19 ಶಾಸಕರು

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮಂತ್ರಿ ಮಂಡಲದ ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆ ಇಂದು ನಡೆದಿದ್ದು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಲೋಕಭವನದಲ್ಲಿ ನಡೆದ ಸಮಾರಂಭದಲ್ಲಿ 19 ಮಂದಿ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು.**

ಲೋಕಭವನದಲ್ಲಿ ನಡೆದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ನೂತನ ಸಚಿವರು ಅಧಿಕಾರದ ಗೌಪ್ಯತೆ ಮತ್ತು ಪ್ರತಿಜ್ಞಾನ ವಿಧಿ ಸ್ವೀಕರಿಸಿದರು. ಕಲ್ಬುರ್ಗಿ ಜಿಲ್ಲೆ ಜೇವರ್ಗಿ ಕ್ಷೇತ್ರದ ಅಜಯ್‌ಸಿಂಗ್ ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ, ಬೆಳಗಾವಿ ಜಿಲ್ಲೆಯ ಅಥಣಿ ಕ್ಷೇತ್ರದ ಲಕ್ಷ್ಮಣ ಸವದಿ, ಶಿವಮೊಗ್ಗ ಜಿಲ್ಲೆ ಸೊರಬ ಮಧುಬಂಗಾರಪ್ಪ, ದಾವಣಗೆರೆ ಉತ್ತರ ಕ್ಷೇತ್ರದ ಎಸ್.ಎಸ್.ಮಲ್ಲಿಕಾರ್ಜುನ್, ಬಳ್ಳಾರಿ ಕ್ಷೇತ್ರದ ಬಿ.ನಾಗೇಂದ್ರ, ಚಾಮರಾಜನಗರ ಕ್ಷೇತ್ರದ ಪುಟ್ಟರಂಗಶೆಟ್ಟಿ, ಚಿತ್ರದುರ್ಗದ ಜಿಲ್ಲೆ ಚಳ್ಳಕೆರೆ ಕ್ಷೇತ್ರ ಟಿ.ರಘುಮೂರ್ತಿ, ಹಾವೇರಿ ಕ್ಷೇತ್ರದ ರುದ್ರಪ್ಪ ಮಾನಪ್ಪ ಲಮಾಣಿ, ಹಾಸನ ಜಿಲ್ಲೆಯ ಅರಸೀಕೆರೆ ಕೆ.ಎಂ.ಶಿವಲಿಂಗೇಗೌಡ, ಕೊಪ್ಪಳ ಜಿಲ್ಲೆ ಕನಕಗಿರಿ ಶಾಸಕ ಶಿವರಾಜ ತಂಗಡಗಿ ದೇವರ ಹೆಸರಿನಲ್ಲಿಶ್ರದ್ಧಾಪೂರ್ವಕವಾಗಿ ಅಧಿಕಾರ ಗೌಪ್ಯತಾ ಪ್ರಮಾಣ ವಚನ ಸ್ವೀಕ–ರಿಸಿದರು. ದಾವಣಗೆರೆ ಜಿಲ್ಲೆ ಮಾಯಕೊಂಡ ಕ್ಷೇತ್ರದ ಶಾಸಕ ಕೆ.ಎಸ್.ಬಸವಂತಪ್ಪ ದೇವರ ಮತ್ತು ಬಸವೇಶ್ವರರ ಹೆಸರಿನಲ್ಲಿ, ಮಂಡ್ಯ ಜಿಲ್ಲೆ ನಾಗಮಂಗಲ ಕ್ಷೇತ್ರದ ಎನ್. ಚೆಲುವರಾಯಸ್ವಾಮಿ ದೇವರು ಮತ್ತು ಅಜ್ಜನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ಶಾಸಕರಾದ ಬಸವರಾಜರಾಯರೆಡ್ಡಿ, ಹುಬ್ಬಳ್ಳಿ–ಧಾರವಾಡ ಜಿಲ್ಲೆಯ ಕಲಗಟಗಿ ಕ್ಷೇತ್ರದ ಸಂತೋಷ್ ಲಾಡ್, ಶಿವಾಜಿನಗರ ರಿಜ್ವಾನ್ ಹರ್ಷದ್ ಶ್ರದ್ಧಾ ಪೂರ್ವಕವಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರೆ, ಮಂಡ್ಯ ಜಿಲ್ಲೆಯ



ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಡಾ.ಬಾಬಾಸಾಹೇಬರ ಮತ್ತು ಗಂಗಾಧರ ಅಜ್ಜನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕ–ರಿಸಿದರು.ಬಾಗಲಕೋಟೆ ಜಿಲ್ಲೆ ಹುನಗುಂದ ವಿಜಯಾನಂದ ಶಿವಶಂಕರಪ್ಪ ಕಾಶಪ್ಪನವರ್ ಕೂಡಲ ಸಂಗಮೇಶ್ವರ, ಬುದ್ಧ ಬಸವ, ಅಂಬೇಡ್ಕರ್, ಭಾರತದ ಸಂವಿಧಾನದ ಮತ್ತು ದೇವರ ಹೆಸರಿನಲ್ಲಿಪ್ರತಿಜ್ಞಾವಿಧಿ ಸ್ವೀಕರಿಸಿದರು.

ಬೆಂಗಳೂರಿನ ಚಾಮರಾಜಪೇಟೆ ಬಿ.ಜೆಡ್.ಜಮೀರ್ ಅಹಮದ್ ಖಾನ್ ಇಂಗ್ಲಿಷ್‌ನಲ್ಲಿ ಅಲ್ಲಾ ಮತ್ತು ತಾಯಿ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಗಮನ ಸೆಳೆದರು.ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಉಪಸ್ಥಿತರಿದ್ದರು. ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹ–ರಿಪ್ರಸಾದ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಮತ್ತಿತರರು ಭಾಗವಹಿಸಿದ್ದರು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ವಿರೋಧ ಪಕ್ಷಗಳ ನಾಯಕರ ಗೈರು ಹಾಜರಿ ಎದ್ದು ಕಾಣುತ್ತಿತ್ತು.

ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನೂತನ ಸರ್ಕಾರ ಅಧಿಕಾರಕ್ಕೆ ಬಂದು ಇಂದಿಗೆ ಸರಿಯಾಗಿ ಎರಡು ತಿಂಗಳಾಗಿದ್ದು, ಎರಡನೇ ಹಂತದ ಸಂಪುಟ ವಿಸ್ತರಣೆ ಬಳಿಕವೂ ಒಂದು ಸ್ಥಾನ ಉಳಿದಿದೆ. ಮೊದಲ ಹೈಕಮಾಂಡ್ ರವಾನಿಸಿದ್ದ ಪಟ್ಟಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ವಿಧಾನ ಪರಿಷತ್ ಸದಸ್ಯೆ ಗಾಯತ್ರಿ ಶಾಂತೇಗೌಡ ಅವರು ಸಚಿವರಾಗಲಿದ್ದಾರೆ ಎಂದು ಉಲ್ಲೇಖಿಸಲಾಗಿತ್ತು. ಆದರೆ ಕೊನೆಯ ಕ್ಷಣದಲ್ಲಿ ಎನ್.ಎಸ್.ಬೋಸರಾಜ್, ಮಾಜಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ,ಉಮಾಶ್ರೀ ಅವರ ತೀವ್ರ ಪೈಪೋಟಿ ನೀಡಿದ್ದರಿಂದ ಒಂದು ಸ್ಥಾನ ಬಾಕಿ ಉಳಿಸಿಕೊಳ್ಳಲಾಗಿದೆ. ಇಂದಿನ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಗಾಯತ್ರಿ ಶಾಂತನಗೌಡ ಅಧಿಕಾರ ಗೌಪ್ಯತಾ ಪ್ರಮಾಣ ವಚನ ಸ್ವೀಕ–ರಿಸಲಿಲ್ಲ. ಈ ಮೂಲಕ ಎರಡನೇ ಹಂತದ ಸಂಪುಟ ವಿಸ್ತರಣೆಯಲ್ಲೂ ಮಹಿಳಾ ಪ್ರಾತಿನಿಧ್ಯ ಇಲ್ಲವಾಗಿದೆ. ಡಿ.ಕೆ.ಶಿವಕುಮಾರ್ ಅವರ ಸಂಪುಟ ಕೇವಲ ಪುರಷ ಪ್ರಾತಿನಿಧ್ಯ ಹೊಂದಿದೆ.

ಕಾಂಗ್ರೆಸ್ ಹೈಕಮಾಂಡ್ ಮೊದಲ ಹಂತದಲ್ಲಿ ರವಾನಿಸಿದ್ದ ಪಟ್ಟಿಯಲ್ಲಿ ಹೆಸ–ರಿದ್ದ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಕ್ಷೇತ್ರದ ಮಂಕಾಳ ವೈದ್ಯ ಅವರನ್ನು ಏಕಾಏಕಿ ಕೈ ಬಿಡಲಾಗಿದೆ. ಬದಲಾಗಿ ದಾವಣಗೆರೆ ಉತ್ತರ ಕ್ಷೇತ್ರ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಸೇರ್ಪಡೆ ಮಾಡಿಕೊಳ್ಳಲಾಗಿದೆ. ಇದರಿಂದ ಗೊಂದಲವೂ ಏರ್ಪಟ್ಟಿತ್ತು. ಅವಕಾಶ ವಂಚಿತ ಶಾಸಕರು ರಾಜೀನಾಮೆ ನೀಡುವ ಬೆದರಿಕೆವೊಡ್ಡಿದ್ದಾರೆ. ಅವರ ಬೆಂಬಲಿಗರು ಪ್ರತಿಭಟನೆ ನಡೆಸಿದ್ದಾರೆ.ಈ ಎಲ್ಲಾ ಪರಿಸ್ಥಿತಿಗಳ ನಡುವೆ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಸಚಿವರಾಗಿದ್ದ ಬಿ.ಜೆಡ್.ಜಮೀರ್ ಅಹಮದ್ ಖಾನ್, ಎಸ್.ಎಸ್.ಮಲ್ಲಿಕಾರ್ಜುನ್, ಎನ್. ಚೆಲುವರಾಯಸ್ವಾಮಿ, ಶಿವರಾಜ ತಂಗಡಗಿ, ಸಂತೋಷ್ ಲಾಡ್, ಮಧುಬಂಗಾರಪ್ಪ, ಸಿದ್ದು ಸರ್ಕಾರದ ಮೊದಲ ಅವಧಿಯಲ್ಲಿ ಸಚಿವರಾಗಿದ್ದ ಪುಟ್ಟರಂಗಶೆಟ್ಟಿ ಮರಳಿ ಡಿ.ಕೆ.ಶಿವಕುಮಾರ್ ಸಂಪುಟದಲ್ಲೂ ಅವಕಾಶಗಿಟ್ಟಿಸಿದ್ದಾರೆ. ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣದಲ್ಲಿ ರಾಜೀನಾಮೆ ನೀಡಿದ್ದ ಬಿ.ನಾಗೇಂದ್ರ ಇಂದು ಮರಳಿ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳುವ ಮೂಲಕ ಇಡಿ ತನಿಖೆಯನ್ನು ಕಾಂಗ್ರೆಸ್ ಕಡೆಗಣಿಸಿದೆ.

ಈ ಹಿಂದೆ ಬೇರೆ ಬೇರೆ ಸರ್ಕಾರಗಳಲ್ಲಿ ಸಚಿವರಾಗಿದ್ದ ಬಸವರಾಜ ರಾಯರೆಡ್ಡಿ, ಪಿ.ಎಂ.ನರೇಂದ್ರಸ್ವಾಮಿ, ಬಿಜೆಪಿ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಲಕ್ಷ್ಮಣ ಸವದಿ, ವಿಧಾನಸಭೆಯ ಉಪಾಧ್ಯಕ್ಷರಾಗಿದ್ದ ರುದ್ರಪ್ಪ ಲಮಾಣಿ ಅವರು ಸಂಪುಟ ಸೇ–ರಿದ್ದಾರೆ. ಹೊಸದಾಗಿ ಎಚ್.ಸಿ.ಬಾಲಕೃಷ್ಣ, ಟಿ.ರಘುಮೂರ್ತಿ, ಅಜಯ್ ಧರ್ಮಸಿಂಗ್, ಕೆ.ಎಸ್.ಬಸವಂತಪ್ಪ, ಕೆ.ಎಂ.ಶಿವಲಿಂಗೇಗೌಡ, ವಿಜಯಾನಂದ ಕಾಶಪ್ಪನವರ್, ರಿಜ್ವಾನ್ ಹರ್ಷದ್ ಸಂಪುಟ ಸೇರಿದ್ದಾರೆ.

ನಿಗದಿತ ಸಮಯ 5 ಗಂಟೆಗೆ ರಾಷ್ಟ್ರಗೀತೆ ಹಾಗೂ ನಾಡಗೀತೆಗಳ ಗಾಯನದೊಂದಿಗೆ ಆರಂಭವಾದ ಪ್ರಮಾಣ ವಚನ ಸ್ವೀಕಾರ ಸಮಾರಂಭ 6.7 ನಿಮಿಷಕ್ಕೆ ವಂದೇ ಮಾತರಂ ಗಾಯನದ ಮೂಲಕ ಮುಕ್ತಾಯಗೊಂಡಿತ್ತು. ಸರ್ಕಾರದ ಮುಖ್ಯಕಾರ್ಯದರ್ಶಿಯವರ ಶಾಲಿನ ರಜನೀಶ್ ಬದಲಾಗಿ, ಅಪರ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತಾ ಕಾರ್ಯಕ್ರಮ ನಿರೂಪಣೆ ಮಾಡಿದರು

## ಸಿಂಧನೂರಿನಲ್ಲಿ ಆಗಸ್ಟ್ 14ರಂದು ಉದ್ಯಮಶೀಲತಾ ತರಬೇತಿ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ರಾಯಚೂರು ಆಗಸ್ಟ್ 03 (ಕರ್ನಾಟಕ ವಾರ್ತೆ): ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ರಾಯಚೂರು ಇವರ ಸಂಂ–ಮುಕ್ತಾಶ್ರಯದಲ್ಲಿ ಸ್ವಂತ ಉದ್ಯೋಗವನ್ನು ಸ್ಥಾಪಿಸಲು ಇಚ್ಚಿಸಿದ ಎಲ್ಲಾ ವರ್ಗದ ಮಹಿಳಾ ಅಭ್ಯರ್ಥಿಗಳಿಗೆ 10 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಗಸ್ಟ್ 14ರಂದು ಜಿಲ್ಲೆಯ ಸಿಂಧನೂರಿನಲ್ಲಿಹಮ್ಮಿಕೊಳ್ಳಲಾಗಿದೆ.**

ತರಬೇತಿಯಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಉದ್ಯಮಶೀಲತೆಯ ಗುಣಲಕ್ಷಣಗಳು ಸ್ವಂತ ಉದ್ಯೋಗ ಸ್ಥಾಪಿಸಲು ಸರ್ಕಾರದ ಯೋಜನೆಗಳು, ಬ್ಯಾಂಕಿನ ವ್ಯವಹಾರ




ಮತ್ತು ಸಾಲ ಸೌಲಭ್ಯಗಳ ಮಾಹಿತಿ ಹಾಗೂ ಸ್ವಯಂ ಉದ್ಯಮಗಳನ್ನು ಸ್ಥಾಪಿಸಲು ಇತ್ಯಾದಿ ವಿಷಯಗಳ ಕು–ರಿತು ಮಾಹಿತಿಯನ್ನು ನೀಡಲಾಗುವುದು.

ರಾಯಚೂರು ಜಿಲ್ಲೆಯ ಆಸಕ್ತ ಎಲ್ಲಾ ವರ್ಗದ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು 18 ವರ್ಷ ದಿಂದ 45 ವರ್ಷ ವಯಸ್ಸಿನವರಾಗಿರಬೇಕು 8ನೇ ತರಗತಿ ಯಿಂದ ಎಸ್.ಎಸ್.ಎಲ್.ಸಿ ವರಗೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತರಿರುವವರು ಆಗಸ್ಟ್ 10ರೊಳಗಾಗಿ ಮೊಬೈಲ್ ಸಂಖ್ಯೆ: 9986600631ಗೆ ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಅಥವಾ ಸಲಹೆಗಾರರು, ಸಿಡಾಕ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಚೇರಿ ನವೀನ ಆಸ್ಪತ್ರೆ ಪಕ್ಕದಲ್ಲಿ ರಾಯಚೂರು ಇಲ್ಲಿಗೆ ಬಂದು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸಿಡಾಕ್ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸರ್ವಜ್ಞ ವಿದ್ಯಾಪೀಠದಲ್ಲಿ ವ್ಯಸನ ಮುಕ್ತ ದಿನ ಆಚರಣೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಡಾ.ಮಹಾಂತಶಿವಯೋಗಿಗಳ ಜನ್ಮ ದಿನಾಚರಣೆಯನ್ನು ವ್ಯಸನ ಮುಕ್ತ ದಿನಾಚರಣೆಯನ್ನಾಗಿ ಶನಿವಾರ ಆಚರಿಸಲಾಯಿತು.**

ಈ ಸಂದರ್ಭದಲ್ಲಿ ಸಂಸ್ಥಾಪಕ ಅಧ್ಯಕ್ಷ ಸಿದ್ದನಗೌಡ ಮಂಗಳೂರ ಅವರು ಮಾತನಾಡಿ ಅಗಸ್ಟ್ 1ರಂದು ರಾಜ್ಯದಲ್ಲಿ ವ್ಯಸನ ಮುಕ್ತ ದಿನಾಚರಣೆಯನ್ನು ಆಚರಿಸಲಾಗುತ್ತದೆ ಇದು ಲಿಂಗೈಕ್ಯ ಡಾ.ಮಹಾಂತ ಶಿವಯೋಗಿಗಳ ಸ್ಮರಣೆ ಮತ್ತು ಅವರ ಆದರ್ಶಗಳ ಮೇರೆಗೆ ಸಮಾಜದಲ್ಲಿ ಮಾದಕ ವಸ್ತುಗಳು ಹಾಗೂ ದುಶ್ಚಟಗಳ ವಿರುದ್ಧ ಜಾಗೃತಿ ಮೂಡಿಸಲು




ಹಮ್ಮಿಕೊಳ್ಳುವ ವಿಶೇಷ ದಿನವಾಗಿದೆ.

ಲಿಂಗೈಕ್ಯ ಡಾ.ಮಹಾಂತ ಶ್ರೀಗಳು ದೈಹಿಕವಾಗಿ ನಮ್ಮೊಂದಿಗೆ ಇಲ್ಲದಿರಬಹುದು ಆದರೆ ಅವರ ವಿಚಾರ ಅವರ ಕನಸು ಇಂದಿಗೂ ನಮ್ಮೊಂದಿಗೆ ಜೀವಂತವಾಗಿದೆ. ಆ ಕನಸಿನ ಬೆಳಕಿನಲ್ಲಿ ನಾವು ವ್ಯಸನ ಮುಕ್ತ ಸುಸ್ಥಿರ ಕರ್ನಾಟಕವನ್ನು ಕಟ್ಟೋಣ ಅದೇ ಅವರಿಗೆ ನಾವು ಸಲ್ಲಿಸುವ ನಿಜವಾದ ಜನ್ಮದಿನದ ಗೌರವವಾಗಿದೆ ಎಂದರು. ಕಾರ್ಯಕ್ರಮದಲ್ಲಿಮುಖ್ಯ ಗುರುಗಳಾದ ಸಂತೋಷ ಪವಾರ ಮತ್ತು ಸರ್ವ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಲೋಕಸಭೆ ಮುಂದುವರೆದ ಗದ್ದಲದ ನಡುವೆಯೇ 2 ಮಸೂದೆ ಮಂಡನೆ

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ನೀಟ್ ಪತ್ರಿಕೆ ಸೋರಿಕೆ ಮತ್ತು ಅಯೋಧ್ಯೆ ರಾಮ ಮಂದಿರದಲ್ಲಿ ಭಕ್ತರ ಕಾಣಿಕೆ ಕಳ್ಳತನ ಆರೋಪದ ವಿರುದ್ಧ ವಿರೋಧ ಪಕ್ಷಗಳು ನಿರಂತರವಾಗಿ ಪ್ರತಿಭಟನೆ ನಡೆಸಿದ್ದರಿಂದ ಇಂದಿನ ಲೋಕಸಭೆ ಕಲಾಪವನ್ನು ಮಧ್ಯಾಹ್ನ 2 ಗಂಟೆಗೆ ಮುಂದೂಡಲಾಯಿತು. ಸದನದ ಸುಗಮ ಕಲಾಪಕ್ಕಾಗಿ ಸ್ಪೀಕರ್ ಪದೆ ಪದೇ ಮನವಿ ಮಾಡಿದರೂ, ವಿಪಕ್ಷಗಳ ಸದಸ್ಯರು ಜೋರು ಗದ್ದಲ ಎಬ್ಬಿಸಿದರು.**

ಗದ್ದಲದ ನಡುವೆ 2 ಮಸೂದೆ ಮಂಡನೆ: ವಿಪಕ್ಷಗಳ ಗದ್ದಲ, ಜೋರು ಘೋಷಣೆಗಳು ನಡುವೆಯೂ ಕೇಂದ್ರ ಸರ್ಕಾರ ಎರಡು ಮಸೂದೆಗಳನ್ನು ಮಂಡಿಸಿತು. ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್ ಬಿಲ್– 2026 ಮತ್ತು ಬ್ಯಾಂಕರ್ಸ್ ಬುಕ್ಸ್ ಎವಿಡೆನ್ಸ್ ಬಿಲ್–



2026 ಅನ್ನು ಸದನದಲ್ಲಿ ಮಂಡಿಸಲಾಯಿತು. ಈ ಎರಡೂ ಮಸೂದೆಗಳ ಮೇಲೆ ಚರ್ಚೆ ನಡೆಸಲು ಸರ್ಕಾರ ವಿಪಕ್ಷಗಳಿಗೆ ನೋಟಿಸ್ ನೀಡಿತ್ತು.

ಆದರೆ, ವಿರೋಧ ಪಕ್ಷಗಳ ಯಾವುದೇ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಲು ಆಸಕ್ತಿ ತೋರಿಸದ ಕಾರಣ, ಮಸೂದೆಗಳನ್ನು ಧ್ವನಿ ಮತದ ಮೂಲಕ ಮಂಡಿಸಲಾಯಿತು.ಸ್ಪೀಕರ್ ಮನವಿ : ಮಸೂದೆ ಮಂಡನೆಯ ಬಳಿಕ ಚರ್ಚೆಗಾಗಿ ವಿಪಕ್ಷಗಳ ಸದಸ್ಯರ ಹೆಸರನ್ನು ಸ್ಪೀಕರ್ ಕೂಗಿದರು. ಆದರೆ, ಯಾರೂ ಕೂಡ ಮಾತನಾಡಲಿಲ್ಲ. ಎಲ್ಲರೂ ತಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ. ಮಸೂದೆಗಳ ಮೇಲೆ ಚರ್ಚೆ ನಡೆಸಿದ ಎಂದು ಪದೆ ಪದೇ ಮನವಿ ಮಾಡಿದರು. ಆದರೆ, ವಿಪಕ್ಷಗಳ ಸದಸ್ಯರು ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗುವುದನ್ನು ಮುಂದುವರಿಸಿದರು. ಇದು ಸಂಸತ್ತಿನ ನಿಯಮಗಳಿಗೆ ವಿರುದ್ಧವಾಗಿದೆ ಎಂದು ಸ್ಪೀಕರ್ ಸದನದ ಗಮನಕ್ಕೆ ತಂದರು.

ಇಷ್ಟಾದರೂ ವಿಪಕ್ಷಗಳು ಕಿವಿಗೊಡದೇ ಪ್ರತಿಭಟನೆ ಮುಂದುವರಿಸಿದಾಗ ಸ್ಪೀಕರ್ ಓಂ ಬಿರ್ಲಾ ಅವರು ಸದನವನ್ನು ಮಧ್ಯಾಹ್ನ 2 ಗಂಟೆಯವರೆಗೆ ಮುಂದೂಡಲಾಗಿದೆ ಎಂದು ಘೋಷಿಸಿದರು. ಇದಕ್ಕೂ ಮೊದಲು ಇಂದಿನ ಅಧಿವೇಶನ ಬೆಳಗ್ಗೆ 11 ಗಂಟೆಗೆ ಆರಂಭವಾದ ತಕ್ಷಣವೇ ಪ್ರತಿಪಕ್ಷಗಳ ಸದಸ್ಯರು ಗಲಾಟೆ ಎಬ್ಬಿಸಿದರು. ಇದರಿಂದ ಸ್ಪೀಕರ್ ಓಂ ಬಿರ್ಲಾ ಅವರು ಸದನವನ್ನು ಮಧ್ಯಾಹ್ನ 12 ಗಂಟೆಯವರೆಗೆ ಮುಂದೂಡಿದ್ದರು.

**ಬರೀ ಗದ್ದಲ, ಮುಂದೂಡಿಕೆ :** ಜುಲೈ 20 ರಿಂದ ಆರಂಭವಾಗಿರುವ ಮಳೆಗಾಲದ ಸಂಸತ್ ಅಧಿವೇಶನದ ಕಳೆದ ಎರಡು ವಾರ ಬರೀ ಗದ್ದಲದಲ್ಲಿಯೇ ಮುಗಿದಿದೆ. ನೀಟ್ ಅಕ್ರಮ ಮತ್ತು ಅದಕ್ಕೆ ಕಡಿವಾಣ ಹಾಕಲು ಕೇಂದ್ರ ಸರ್ಕಾರ ಪರಿಚಯಿಸಿರುವ ಪರೀಕ್ಷಾ ಅಕ್ರಮ ತಡೆ ಮಸೂದೆಯ ಮೇಲೆ ಎರಡು ದಿನ ಚರ್ಚೆ ನಡೆದಿದ್ದು ಬಿಟ್ಟರೆ ನಿತ್ಯ ಗದ್ದಲ, ಪ್ರತಿಭಟನೆಯಿಂದ ಕಲಾಪ ನಡೆಯುತ್ತಿಲ್ಲ.

## ಸಾಹಿತ್ಯ ಸಿಂಚನ

### ಚಂದ್ರನ ನಗು

ನಿಶೆಯ ನಭದಲ್ಲಿ ನಗುವ ಚಂದ್ರ,
ಮನದಾಳದ ಕನಸಿಗೆ ಮಧುರ ಮಂತ್ರ.

ಬೆಳ್ಳಿಯ ಕಿರಣಗಳ ಮೃದುವಾದ ಹೊಳಪು,
ಭೂಮಿಯೆಲ್ಲ ಹರಡುವ ಶಾಂತಿಯ ಬೆಳಕು.

ನಕ್ಷತ್ರಗಳ ಜೊತೆ ಸ್ನೇಹದ ಮಾತು,
ಗಾಳಿಯೊಡನೆ ಹಾಡುವ ಮೌನದ ಗೀತೆ.

ಕತ್ತಲೆಯ ನಡುವೆ ಆಶೆಯ ಕಿರಣ,
ಚಂದ್ರನ ನಗು ಜೀವನದ ಸ್ಫೂರಣ.

ಸರೋವರದ ನೀರಲಿ ಮೂಡುವ ಪ್ರತಿಬಿಂಬ,
ಮನದಾಳ ತುಂಬಿಸುವ ಸೌಂದರ್ಯದ ಸಂಭ್ರಮ.

ಮೋಡದ ಹಿಂದೆ ಅಡಗಿದರೂ,
ಮತ್ತೆ ನಗುತ್ತಲೇ ಹೊರಬರುವನು.

ಮಕ್ಕಳ ಕನಸಿನ ಮುದ್ದು ಗೆಳೆಯ,
ಕವಿಗಳ ಕಲ್ಪನೆಗೆ ಚಿರ ಬೆಳಕಯ್ಯ.

ಪ್ರಕೃತಿಯ ಮಡಿಲಿನ ಅಮೂಲ್ಯ ರತ್ನ,
ನೋಡಿದ ಮನಕೆ ನೀಡುವ ಚೈತನ್ಯ.

ಚಂದ್ರನ ನಗು ಹೇಳುವ ಸಂದೇಶ,
ಕತ್ತಲೆಯ ಬಳಿಕವೇ ಬೆಳಕಿನ ವಿಶೇಷ.

ಜೀವನದಲ್ಲೂ ನಗುತ್ತ ಸಾಗು,
ಚಂದ್ರನಂತೆ ಎಲ್ಲರ ಮನ ಗೆಲ್ಲು.

## ಮಾವಿನಬಾವಿ ಗ್ರಾಮ ಅಂಜುಮನ್–ಎ–ಮುಸ್ಲಿಮೀನ್ ನೂತನ ಕಮಿಟಿ ರಚನೆ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸೂಗೂರು: ಅಂಜುಮನ್–ಎ–ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿ (ರಿ) ವತಿಯಿಂದ ಆಗಸ್ಟ್ 2, 2026ರಂದು ಮಾವಿನಬಾವಿ ಗ್ರಾಮದ ಜಾಮಿಯಾ ಮಸೀದಿಯಲ್ಲಿ ಸಮುದಾಯದ ಸಭೆಯನ್ನು ಆಯೋಜಿಸಲಾಯಿತು.**



ಸಭೆಯಲ್ಲಿ ಮಾವಿನಬಾವಿ ಗ್ರಾಮದ ಅಂಜುಮನ್–ಎ–ಮುಸ್ಲಿಮೀನ್ ನೂತನ ಕಮಿಟಿಯನ್ನು ಸಮುದಾಯದವರ ಸರ್ವಾನುಮತದ ಅಭಿಪ್ರಾಯದ ಮೇರೆಗೆ ಆಯ್ಕೆ ಮಾಡಲಾಯಿತು. ನೂತನ ಕಮಿಟಿಯ ಗೌರವ ಅಧ್ಯಕ್ಷರಾಗಿ ಬಡೆಸಾಬ್, ಅಧ್ಯಕ್ಷರಾಗಿ ಫಯಾಜ್ ಉಲ್ ಹಕ್ ಖಾಜಿ, ಉಪಾಧ್ಯಕ್ಷರಾಗಿ ದಾವಲ್ ಸಾಬ್, ಇನ್ನೋರ್ವ ಉಪಾಧ್ಯಕ್ಷರಾಗಿ ಮುರ್ತುಜ, ಪ್ರಧಾನ ಕಾರ್ಯದರ್ಶಿಯಾಗಿ ಗೋಕುಲ ಸಾಬ್, ಖಜಾಂಚಿಯಾಗಿ ಸಯ್ಯದ್ ಬಾಬು, ಜಂಟಿ ಕಾರ್ಯದರ್ಶಿಯಾಗಿ ರಾಜಮಹ್ಮದ್, ಕಾರ್ಯದರ್ಶಿಯಾಗಿ ಶಾಯಿಬಾಬು ಹಾಗೂ ಸಹ ಕಾರ್ಯದರ್ಶಿಯಾಗಿ ನಜೀರ್ ಶೇಖ್ ಅವರನ್ನು ಆಯ್ಕೆ ಮಾಡಲಾಯಿತು.

ಅದೇ ರೀತಿ ಸದಸ್ಯರಾಗಿ ಅಮೀರ್ ಸಾಬ್, ಮೌಲಾಸಾಬ್, ಹಾಜಿಬಾಬು, ಮುರ್ತುಜಾ, ವಸಿಂ, ಬಡೆಸಾಬ್, ಭಾಷಾಸಾಬ್, ಇಮ್ತಿಯಾಜ್, ಬಾಬು, ಸದ್ದಾಂ, ಶರೀಫ್, ಹುಸೇನ್ ಸಾಬ್, ಚಾಂದಪಾಷಾ, ತಬರೇಜ್ ಹಾಗೂ ಬಕ್ಷಾರ್ ಅವರನ್ನು ಆಯ್ಕೆ ಮಾಡಲಾಯಿತು.

ಇದರೊಂದಿಗೆ ಅಂಜುಮನ್–ಎ–ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಜನಾಬ್ ಹಸೇನಸಾಬ್ ಶೇಖ್, ಜನಾಬ್ ಡಾ. ಫರೀದ್ ಉಲ್ ಹಕ್ ಖಾಜಿ, ಜನಾಬ್ ಎಂಡಿ ಸಾಬೀರ್ ಉಲ್ ಹಕ್ ಖಾಜಿ, ಜನಾಬ್ ಹುಸೇನ್ ಸಾಬ್ ಹಾದಿಮನಿ, ಜನಾಬ್ ಅಬ್ದುಲ್ ಸಾಬ್ ಶೇಖ್, ಜನಾಬ್ ಖಾಜೇಸಾಬ್ ಹಾದಿಮನಿ ಹಾಗೂ ಜನಾಬ್ ಹಸೇನ್ ಸಾಬ್ ಹೊಸೂರ ಅವರನ್ನು ಮಾವಿನಬಾವಿ ಗ್ರಾಮದ ಸಮುದಾಯದವರ ಒಮ್ಮತದ ಅಭಿಪ್ರಾಯದ ಮೇರೆಗೆ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಅಂಜುಮನ್–ಎ–ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿಯ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ನೂತನವಾಗಿ ಆಯ್ಕೆಯಾದ ಮಾವಿನಬಾವಿ ಗ್ರಾಮದ ಅಂಜುಮನ್ ಕಮಿಟಿಯ ಪದಾಧಿಕಾರಿಗಳು ಹಾಗೂ ಸದಸ್ಯರು, ಸಮುದಾಯದ ಗುರು–ಹಿರಿಯರು ಮತ್ತು ಸಹೋದರರು ಉಪಸ್ಥಿತ–ರಿದ್ದು, ನೂತನ ಕಮಿಟಿಗೆ ಶುಭ ಹಾರೈಸಿದರು.

## ವಿದ್ಯಾರ್ಥಿ ಜೀವನದಲ್ಲಿ ಕೇವಲ ಅಂಕಗಳಷ್ಟೇ ಸಾಲದು, ಸಂಸ್ಕಾರ ಮತ್ತು ರೀತಿ–ನೀತಿಗಳು ಮುಖ್ಯ: ಡಾ. ಪ್ರಕಾಶ. ಎನ್.ನರಗುಂದ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಗಳಿಸುವ ಅಂಕಗಳಷ್ಟೇ ಅಲ್ಲದೆ, ಜೀವನದಲ್ಲಿ ಉತ್ತಮ ಸಂಸ್ಕಾರ, ಧರ್ಮದ ಹಾದಿ ಹಾಗೂ ಹಿರಿಯ–ರಿಗೆ ಗೌರವ ನೀಡುವ ರೀತಿ–ನೀತಿಗಳನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯ ಎಂದು ಮುದ್ದೇಬಿಹಾಳದ ಪ್ರಾಧ್ಯಾಪಕರಾದ ಡಾ. ಪ್ರಕಾಶ. ಎನ್.ನರಗುಂದ ಅಭಿಪ್ರಾಯಪಟ್ಟರು.**




ಸ್ಥಳೀಯ ಎಸ್‌ಕೆ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಶೈಕ್ಷಣಿಕ ಕಾರ್ಯಕ್ರಮ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯ ಹಾಗೂ ಪೂಜ್ಯ ಖಾಸಗತೇಶರ ಆಶೀರ್ವಾದದೊಂದಿಗೆ ನಡೆದ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಪ್ರೇರಣಾದಾಯಿ ಮಾತುಗಳನ್ನಾಡಿದರು.

ಪ್ರಮುಖ ವಿಚಾರಗಳು:

ಸಂಸ್ಕಾರದ ಮಹತ್ವ: ವಿದ್ಯಾರ್ಥಿಗಳು ಕೇವಲ ಪುಸ್ತಕದ ಬದನೆಕಾಯಿಯಾಗದೆ, ಮನೆತನದ ಆಚಾರ–ವಿಚಾರ ಹಾಗೂ ಪೂರ್ವಜರು ಹಾಕಿಕೊಟ್ಟ ಉತ್ತಮ ಸಂಸ್ಕಾರವನ್ನು ಮೈಗೂಡಿಸಿಕೊಳ್ಳಬೇಕು.

ಸಮಯ ಮತ್ತು ಮೊಬೈಲ್ ಬಳಕೆ: ಸಮಯ ಅತ್ಯಂತ ಬೆಲೆಬಾಳುವಂತದ್ದು. ವಿದ್ಯಾರ್ಥಿಗಳು ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳ (WhatsApp, Facebook, YouTube) ಅನಗತ್ಯ ಬಳಕೆಯಿಂದ ದೂರವಿದ್ದು, ಅಭ್ಯಾಸದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು.

ಸಾಹಿತ್ಯದ ಅರಿವು: ಬಸವಣ್ಣ, ಅಕ್ಕಮಹಾದೇವಿ ಹಾಗೂ ದರಾ ಬೇಂದ್ರೆಯವರ ಸಾಹಿತ್ಯದಲ್ಲಿ ಜೀವನದ ನಿಜವಾದ ಮೌಲ್ಯಗಳಿವೆ. ಜಾನಪದ ಸಾಹಿತ್ಯ ಮತ್ತು ತತ್ವಪದಗಳು ಮಾನವನಿಗೆ ನೈಜ ದಾರಿ ತೋರಿಸುತ್ತವೆ.

ಗುರು–ಹಿರಿಯರ ಗೌರವ: ಹೆತ್ತ ತಂದೆ–ತಾಯಂದಿರು ಮತ್ತು ಬೋಧಿಸಿದ ಶಿಕ್ಷಕರ ಶ್ರಮಕ್ಕೆ ಗೌರವ ನೀಡಿ, ಕಾಲೇ–ಜಿಗೆ ಹಾಗೂ ತಾಲೂಕಿಗೆ ಕೀರ್ತಿ ತರುವ ರೀತಿಯಲ್ಲಿ ಬೆಳೆಯಬೇಕು. "ವಿದ್ಯಾ ಧನವು ಸರ್ವ ಧನಕ್ಕಿಂತ ಶ್ರೇಷ್ಠವಾದುದು. 'ಕಾಯಕವೇ ಕೈಲಾಸ' ಎಂಬ ತತ್ವದಂತೆ ಸತತ ಅಭ್ಯಾಸ, ಶ್ರಮ ಹಾಗೂ ಧೈರ್ಯದಿಂದ ಮುನ್ನಡೆದರೆ ಯಶಸ್ಸು ಖಂಡಿತ ಸಾಧ್ಯ" ಎಂದು ಅವರು ಹೇಳಿದರು.

ಪಿಯು ಕಾಲೇಜಿನ ಚೇರಮನ್ನರು ಎಮ್. ಆರ್. ಕತ್ತಿ ಮಾತನಾಡಿದರು. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ನಮ್ಮಲ್ಲಿ ಭೋದನೆ, ಹೆಚ್ಚು ಅಂಕಗಳನ್ನು ಗಳಿಸಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಅನುಸ–ರಿಸುತ್ತ ಸಾಗಿ ಎಂದು ಸಲಹೆ ನೀಡಿದರು. ವಿ ವಿ ಸಂಘದ ಸದಸ್ಯರು ದ್ಯಾಮನಗೌಡ. ಕೆ.ಪಾಟೀಲ ಮಾತನಾಡಿದರು. ವಿವಿ ಸಂಘದ ಸಹ ಕಾರ್ಯದರ್ಶಿ ಆರ್.ಸಿ . ಪಾಟೀಲ ಅವರು ಸಸಿಗೆ ನೀರುಣಿಸಿ ಸಮಾರಂಭ ಉದ್ಘಾಟಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಕಿಶೋರಕುಮಾರ ಕೆ. ಅವರು ಸ್ಥಳದಲ್ಲಿಯೇ ಡಾ। ಪ್ರಕಾಶ ಅವರ ಕುರಿತು ತಾವು ರಚಿಸಿದ ಕವನ ವಾಚಿಸಿದರು. ಇದೇ ಸಮಯದಲ್ಲಿ ಸಿಬ್ಬಂದಿ ಪಿ.ಆರ್. ಚಲವಾದಿ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ವಿವಿ ಸಂಘದ ಉಪಾಧ್ಯಕ್ಷ ಕಾಶೀನಾಥ ಮುರಾಳ, ಕಾರ್ಯದರ್ಶಿ ಎಂ. ಎಸ್. ಸರಶೆಟ್ಟಿ, ಸಹ ಕಾರ್ಯದರ್ಶಿ ಆರ್.ಸಿ. ಪಾಟೀಲ, ನಿರ್ದೇಶಕ ಮಂಡಳಿಯವರಾದ ಕೆ.ಸಿ. ಸಜ್ಜನ, ಎಂ.ಜಿ. ಕತ್ತಿ, ಗುರನಗೌಡ ಪಾಟೀಲ, ಶಂಕರಗೌಡ ಪಾಟೀಲ ಹಾಗೂ ಕಾಲೇಜ್ ಸಿಬ್ಬಂದಿಗಳಾದ ತಾರಾ ಕಾಂಬಳೆ, ಎ.ಆರ್. ಜೋಗುರ, ಎಸ್.ಎಸ್. ನೆಲ್ಲಿಗಿ, ಸಿ.ಜಿ. ಮಠಪತಿ, ಎಸ್.ಐ. ಗಾಣಗೇರ, ಎಸ್. ಕೆ. ನಾಟೀಕಾರ, ಕೆ.ಸಿ. ಸಜ್ಜನ, ಕೆ.ಆರ್. ಹೊಟಗಾರ, ಕುಮಾರ ಪವಾರ ಇದ್ದರು. ವಿದ್ಯಾರ್ಥಿಗಳ ಸಂಘದ ಪದಾಧಿಕಾ–ರಿಗಳ ಆಯ್ಕೆ ಹಾಗೂ ಪ್ರಮಾಣ ವಚನ ಬೋಧನೆ ಕಾರ್ಯಕ್ರಮ ನಡೆಯಿತು. ಅನನ್ಯಾ ನಾಯಕ ಭರತನಾಟ್ಯ ಪ್ರದರ್ಶಿಸಿದರು. ಶಿಕ್ಷಕ ಮೇಟಿ ಸ್ವಾಗತಗೀತೆ ಹಾಡಿದರು. ಪ್ರಾಧ್ಯಾಪಕ ಡಾ। ಹನುಮಂತ ಪಿ. ನಾಯಕ ಸ್ವಾಗತಿಸಿದರು. ಉಪನ್ಯಾಸಕ ಎಚ್.ಆಯ್. ಬೇರಗಿ ನಿರೂಪಿಸಿದರು.

## ಸಹಕಾರಿಗಳ ಜ್ಞಾನೋತ್ಸವದಲ್ಲಿ ಕುಷ್ಟಗಿಗೆ ತೃತೀಯ ಸ್ಥಾನ

❑ ನೈಜ್ಯ ದೆಸೆ ನ್ಯೂಸ್


**ಕುಷ್ಟಗಿ: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ವತಿಯಿಂದ ಆ.1ರಂದ ಕೊಪ್ಪಳದಲ್ಲಿ ಆಯೋಜಿಸಿದ್ದ 'ಸಹಕಾರಿಗಳ ಜ್ಞಾನೋತ್ಸವ?2026' ರಸಪ್ರಶ್ನೆ (ಕ್ವಿಜ್) ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪೈಕಿ ಕುಷ್ಟಗಿ ತಾಲೂಕಿನ ಸೌಹಾರ್ದ ಸಹಕಾರಿ ಸಂಘಗಳ ವಿಭಾಗದಲ್ಲಿ ತೃತೀಯ ಸ್ಥಾನ ಪಡೆದು ಪ್ರಶಸ್ತಿ ಹಾಗೂ ಪ್ರಮಾಣಪತ್ರ ಗಳಿಸಿರುವುದು ಹೆಮ್ಮೆಯ ಸಂಗತಿಯಾಗಿದೆ.**



ಸ್ಪರ್ಧೆಯಲ್ಲಿ ಭಾಗವಹಿಸಿ ತೃತೀಯ ಸ್ಥಾನ ಗಳಿಸಿದ ಶಿವಶರಣ ಬಿ. ನಾಲತ್ವಾಡ, ಬನ್ನಿಗೋಳ ಅವರನ್ನು ಶ್ರೀ ಸಪ್ತಗಿರಿ ಸೌಹಾರ್ದ ಸಹಕಾರಿ ಸಂಘ, ಕುಷ್ಟಗಿಯ ಆಡಳಿತ ಮಂಡಳಿ ಹಾಗೂ ಮುಖ್ಯ ಕಾರ್ಯನಿರ್ವಾಹಕರು ಅಭಿನಂದಿಸಿದ್ದಾರೆ. ಅದೇ ರೀತಿ ಶ್ರೀ ಶಿವಶಂಕರಿ ಸೌಹಾರ್ದ ಸಹಕಾರಿ ಸಂಘ ನಿ., ಕುಷ್ಟಗಿಯ ಆಡಳಿತ ಮಂಡಳಿಯೂ ಶಿವಶರಣ ಬಿ. ನಾಲತ್ವಾಡ ಅವರ ಸಾಧನೆಗೆ ಅಭಿನಂದನೆ ಸಲ್ಲಿಸಿ, ಮುಂದಿನ ದಿನಗಳಲ್ಲಿಯೂ ಇನ್ನಷ್ಟು ಯಶಸ್ಸು ಸಾಧಿಸಲಿ ಎಂದು ಶುಭ ಹಾರೈಸಿದೆ. ಸಹಕಾರ ಕ್ಷೇತ್ರದ ಕು–ರಿತು ಜ್ಞಾನ ಮತ್ತು ಅರಿವು ಹೆಚ್ಚಿಸುವ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಾಧನೆ ಮಾಡಿರುವುದು ಇತರ ಸಹಕಾರಿಗಳಿಗೆ ಪ್ರೇರಣೆಯಾಗಿದೆ ಎಂದು ಸಂಘದ ಆಡಳಿತ ಮಂಡಳಿ ತಿಳಿಸಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ರಾಜಾ ಕಾಲುವೆ ಒತ್ತುವರಿ ತೆರವುಗೊಳಿಸದೇ ಲೇಔಟ್‌ಗೆ ಅನುಮೋದನೆ ನೀಡಬಾರದು: ಕೆ.ಈ. ನರಸಿಂಹ



❑ ನೈಜ್ಯ ದೆಸೆ ನ್ಯೂಸ್

**ಮಾನವಿ: ಪಟ್ಟಣದ ವಾರ್ಡ್ ನಂ.16ರ ವ್ಯಾಪ್ತಿಯ ಸರ್ವೇ ನಂ.508/1/1, 508/1/2, 508/1/3 ಹಾಗೂ 508/1/4 ಜಮೀನುಗಳಲ್ಲಿ ನಿರ್ಮಿಸಲಾಗುತ್ತಿರುವ ಲೇಔಟ್‌ಗೆ, ರಾಜಾ ಕಾಲುವೆ ಸಮಸ್ಯೆ ಬಗೆಹರಿಯುವವರೆಗೆ ಯಾವುದೇ ಪ್ಲಾಟ್ ಅನುಮೋದನೆ ನೀಡಬಾರದು ಎಂದು ಸ್ಥಳೀಯ ನಿವಾಸಿ ಕೆ.ಈ. ನರಸಿಂಹ ಆಗ್ರಹಿಸಿದರು.**

ಈ ಕುರಿತು ತಹಸೀಲ್ದಾರರು, ಪುರಸಭೆ ಮುಖ್ಯಾಧಿಕಾರಿಗಳು ಹಾಗೂ ನಗರ ಯೋಜನಾ ಪ್ರಾಧಿಕಾರದ ಅಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ, ಮೇಲ್ಕಂಡ ಜಮೀನುಗಳಿಗೆ ಜಿಲ್ಲಾಧಿಕಾರಿಗಳಿಂದ ವಸತಿ ಉದ್ದೇಶಕ್ಕಾಗಿ ಎನ್.ಎ. ಪರವಾನಗಿ ನೀಡಲಾಗಿದ್ದು, ಲೇಔಟ್ ನಿರ್ಮಾಣದ ವೇಳೆ ರಾಜಾ ಕಾಲುವೆಯನ್ನು ಒತ್ತುವರಿ ಮಾಡಿಕೊಂಡು ಸುಮಾರು 2.6 ಅಡಿ ಅಗಲದ ಡ್ರೈನೇಜ್ ನಿರ್ಮಿಸಿರುವುದ–ರಿಂದ ಮಳೆನೀರು ಸರಾಗವಾಗಿ ಹ–ರಿಯಲು ಅಡ್ಡಿಯಾಗಿದೆ ಎಂದು ದೂರಿದ್ದಾರೆ.

ಮಾನವಿ ಪಟ್ಟಣದ ನಾಲಾ ರಸ್ತೆ ಹಾಗೂ ಸಿಮೆಂಟ್ ರಸ್ತೆಯಿಂದ ದೌಲಪ್ಪ ಅವರ ಮನೆಯ ಮಾರ್ಗವಾಗಿ ಹ–ರಿದುಬರುವ ಮಳೆನೀರು ಮತ್ತು ಚರಂಡಿ ನೀರು ರಾಜಾ ಕಾಲುವೆಯ ಮೂಲಕವೇ ಹ–ರಿದು ಹೋಗುತ್ತದೆ. ಆದರೆ ಕಾಲುವೆಯನ್ನು ಕಿರಿದಾಗಿಸಿರುವುದರಿಂದ ಮಳೆಗಾಲದಲ್ಲಿ ನೀರು ಸರಿಯಾಗಿ ಹರಿಯದೆ ಕಾಲುವೆ ಪಕ್ಕದಲ್ಲಿರುವ ಮನೆಗಳಿಗೆ ನೀರು ನುಗ್ಗುವ ಅಪಾಯ ಎದುರಾಗಿದೆ ಎಂದು ಅವರು ತಿಳಿಸಿದ್ದಾರೆ.

ಸುಮಾರು 50ಕ್ಕೂ ಹೆಚ್ಚು ಮನೆಗಳ ಮಳೆನೀರು ಇದೇ ಕಾಲುವೆಯ ಮೂಲಕ ಹರಿಯಬೇಕಾಗಿರುವುದರಿಂದ ಮುಂದಿನ ದಿನಗಳಲ್ಲಿ ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗುವ ಸಾಧ್ಯತೆ ಇದೆ. ಆದ್ದ–ರಿಂದ ಕೂಡಲೇ ಸ್ಥಳ ಪರಿಶೀಲನೆ ನಡೆಸಿ, ರಾಜಾ ಕಾಲುವೆಯ ಮೇಲಿನ ಒತ್ತುವ–ರಿಯನ್ನು ತೆರವುಗೊಳಿಸಿ, ಸಮಸ್ಯೆ ಬಗೆಹ–ರಿಯುವವರೆಗೆ ಸದರಿ ಲೇಔಟ್‌ನ ಪ್ಲಾಟ್‌ಗಳಿಗೆ ಯಾವುದೇ ಅನುಮೋದನೆ ನೀಡದಂತೆ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಈ ಸಂಬಂಧ ತಹಸೀಲ್ದಾರರು, ಪುರಸಭೆ ಹಾಗೂ ನಗರ ಯೋಜನಾ ಪ್ರಾಧಿಕಾರದ ಅಧಿಕಾರಿಗಳಿಗೆ ಪ್ರತ್ಯೇಕವಾಗಿ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ನಾಗೇಶ್ ಕಬ್ಬೆರ್, ಲಕ್ಷಣ ಭಂಡಾರಿ, ರೇವಣಸಿದ್ದಯ್ಯ, ಮೊಹಮ್ಮದ್ ರಫಿ, ಬಸವರಾಜ, ರವಿಕುಮಾರ್, ಕೆ. ಎನ್. ನಾಗರಾಜ್, ವೆಂಕಟೇಶ, ಕಾಂತಪ್ಪ, ಅಂಜನೇಯ, ರಾಮಾಂಜನೇಯ ಸೇರಿದಂತೆ ವಾರ್ಡ್ ನಂ.16ರ ಅನೇಕ ನಿವಾಸಿಗಳು ಉಪಸ್ಥಿತರಿದ್ದು, ಅಧಿಕಾರಿಗಳು ಶೀಘ್ರ ಸ್ಥಳ ಪರಿಶೀಲನೆ ನಡೆಸಿ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಒತ್ತಾಯಿಸಿದರು.

## ರಾಯಚೂರು ರಾಜಕೀಯದಲ್ಲಿ ಮತ್ತೆ ಹಿನ್ನಡೆ: ಸಚಿವ ಸ್ಥಾನಕ್ಕೆ ಚೊಂಬು, ಜಿಲ್ಲೆಯ ನಿರೀಕ್ಷೆ ಭಗ್ನ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ಅಭಿವೃದ್ಧಿ, ನೀರಾವರಿ, ಕೈಗಾರಿಕೆ, ಉದ್ಯೋಗ, ಶಿಕ್ಷಣ ಹಾಗೂ ಮೂಲಸೌಕರ್ಯ ಸೇರಿದಂತೆ ಹಲವು ಪ್ರಮುಖ ವಿಷಯಗಳಲ್ಲಿ ರಾಜ್ಯ ಸರ್ಕಾರದ ವಿಶೇಷ ಗಮನ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಪರವಾಗಿ ಸಚಿವ ಸಂಪುಟದಲ್ಲಿ ಪ್ರಭಾವಿ ಧ್ವನಿ ಇರಬೇಕೆಂಬ ಒತ್ತಾಯ ಮತ್ತೊಮ್ಮೆ ಕೇಳಿಬಂದಿದೆ.**




ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ನೇತೃತ್ವದ ಸರ್ಕಾರ ರಚನೆಯ ಸಂದರ್ಭದಲ್ಲಿ ಮೊದಲ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲೇ ರಾಯಚೂರು ಜಿಲ್ಲೆಗೆ ಸಚಿವ ಸ್ಥಾನ ಸಿಗದಿರುವುದು ಜಿಲ್ಲೆಯ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿತ್ತು. ಆದರೆ, ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ಜಿಲ್ಲೆಯೊಬ್ಬರಿಗೆ ಸಚಿವ ಸ್ಥಾನ ದೊರೆಯಲಿದೆ ಎಂಬ ವಿಶ್ವಾಸದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಜಿಲ್ಲೆಯ ನಾಯಕರು ನಿರೀಕ್ಷೆಯಿಂದ ಕಾಯುತ್ತಿದ್ದರು.

ಎರಡನೇ ಪಟ್ಟಿಯಲ್ಲಿಯೂ ರಾಯಚೂರು ಜಿಲ್ಲೆಗೆ ಸಚಿವ ಸ್ಥಾನ ದೊರೆಯದಿರುವುದು ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸಾರ್ವಜನಿಕರಲ್ಲಿ ಮತ್ತೆ ನಿರಾಸೆ ಮೂಡಿಸಿದೆ. ಜಿಲ್ಲೆಯ ಜನಪ್ರತಿನಿಧಿಗಳು, ಹಿರಿಯ ನಾಯಕರು ಹಾಗೂ ಪಕ್ಷದ ಮುಖಂಡರು ಸಚಿವ ಸ್ಥಾನಕ್ಕಾಗಿ ಪ್ರಯತ್ನ ನಡೆಸಿದ್ದರೂ ಅಂತಿಮ ಪಟ್ಟಿಯಲ್ಲಿ ಜಿಲ್ಲೆಯ ಹೆಸರಿಲ್ಲದಿರುವುದು ಅಚ್ಚರಿಗೆ ಕಾರಣವಾಗಿದೆ. ರಾಯಚೂರು ಜಿಲ್ಲೆ ರಾಜ್ಯ ರಾಜಕೀಯದಲ್ಲಿ ಪ್ರಮುಖ ಸ್ಥಾನ ಹೊಂದಿದ್ದರೂ, ಸತತವಾಗಿ ಸಚಿವ ಸಂಪುಟದಲ್ಲಿ ಸಮರ್ಪಕ ಪ್ರಾತಿನಿಧ್ಯ ಸಿಗದಿರುವ ಬಗ್ಗೆ ಅಸಮಾಧಾನ ವ್ಯಕ್ತವಾಗುತ್ತಿದೆ. ಜಿಲ್ಲೆಯ ಅಭಿವೃದ್ಧಿಗೆ ಸಚಿವರ ಪ್ರಾತಿನಿಧ್ಯ ಅಗತ್ಯ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

ಜಿಲ್ಲೆಯ ನಾಯಕರ ನಡುವಿನ ಒಗ್ಗಟ್ಟಿನ ಕೊರತೆ, ಪಕ್ಷದ ಆಂತರಿಕ ರಾಜಕೀಯ, ಪ್ರಾದೇಶಿಕ ಹಾಗೂ ಜಾತಿ ಸಮೀಕರಣಗಳಂತಹ ಹಲವು ಅಂಶಗಳು ಸಚಿವ ಸ್ಥಾನ ಕೈತಪ್ಪಲು ಕಾರಣವಾಗಿರಬಹುದು ಎಂಬ ಚರ್ಚೆಗಳು ನಡೆಯುತ್ತಿವೆ. ಜಿಲ್ಲೆಯ ಹಿರಿಯ ಕಾಂಗ್ರೆಸ್ ಮುಖಂಡ ಹಾಗೂ ಐದು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ನೂರಕ್ಕೆ ನೂರು ಸಚಿವ ಸ್ಥಾನ ದೊರೆಯಲಿದೆ ಎಂದು ಅವರ ಆಪ್ತರು, ಬೆಂಬಲಿಗರು ವಿಶ್ವಾಸ ವ್ಯಕ್ತಪಡಿಸಿದ್ದರು. ಆದರೆ ಅಂತಿಮ ಪಟ್ಟಿಯಲ್ಲೂ ಅವರ ಹೆಸರು ಕಾಣಿಸದಿರುವುದು ಕಾರ್ಯಕರ್ತರಿಗೆ ನಿರಾಸೆ ಉಂಟುಮಾಡಿದೆ.

ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕ ಬಸನಗೌಡ ದದ್ದಲ ಅವರಿಗೂ ಈ ಬಾರಿ ಸಚಿವ ಸ್ಥಾನ ಸಿಗಲಿದೆ ಎಂಬ ನಿರೀಕ್ಷೆ ಇತ್ತು. ಆದರೆ ಅವರ ಆಶೆಯೂ ಈಡೇರಲಿಲ್ಲ. ಜಿಲ್ಲೆಯ ಹಿರಿಯ ಕಾಂಗ್ರೆಸ್ ನಾಯಕರುಗಳಾದ ಎನ್ ಎಸ್ ಬೋಸರಾಜು ಹಾಗೂ ಎ. ವಸಂತಕುಮಾರ್ ಅವರು ಪಕ್ಷದ ಸಂಘಟನೆ ಬಲಪಡಿಸಲು ರಾಜ್ಯದ ವಿವಿಧ ಭಾಗಗಳಲ್ಲಿ ಚುನಾವಣಾ ಪ್ರಚಾರ ನಡೆಸಿ, ಪಕ್ಷದ ಗೆಲುವಿಗೆ ಶ್ರಮಿಸಿದ ನಾಯಕರಾಗಿದ್ದಾರೆ. ಇಷ್ಟಾದರೂ ರಾಯಚೂರು ಜಿಲ್ಲೆಗೆ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ದೊರೆಯದಿರುವುದು ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸಾರ್ವಜನಿಕರಲ್ಲಿ ತೀವ್ರ ನಿರಾಶೆ ಮೂಡಿಸಿದೆ.

ಎರಡನೇ ಪಟ್ಟಿಯಲ್ಲೂ ಸಚಿವ ಸ್ಥಾನ ಸಿಗದ ಹಿನ್ನೆಲೆಯಲ್ಲಿ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಅಸಮಾಧಾನ ವ್ಯಕ್ತವಾಗಿದ್ದು, ಮುಂದಿನ ದಿನಗಳಲ್ಲಿ ಪಕ್ಷದ ವರಿಷ್ಠರು ರಾಯಚೂರು ಜಿಲ್ಲೆಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ಕಲ್ಪಿಸುತ್ತಾರೆಯೇ ಎಂಬ ಪ್ರಶ್ನೆ ಈಗ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ರಾಯಚೂರು ಜಿಲ್ಲೆಯ ಅಭಿವೃದ್ಧಿ, ನೀರಾವರಿ, ಕೈಗಾರಿಕೆ, ಉದ್ಯೋಗ, ಶಿಕ್ಷಣ ಹಾಗೂ ಮೂಲಸೌಕರ್ಯ ಸೇರಿದಂತೆ ಹಲವು ಪ್ರಮುಖ ವಿಷಯಗಳಲ್ಲಿ ರಾಜ್ಯ ಸರ್ಕಾರದ ವಿಶೇಷ ಗಮನ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಪರವಾಗಿ ಸಚಿವ ಸಂಪುಟದಲ್ಲಿ ಪ್ರಭಾವಿ ಧ್ವನಿ ಇರಬೇಕೆಂಬ ಒತ್ತಾಯ ಮತ್ತೊಮ್ಮೆ ಕೇಳಿಬಂದಿದೆ.

## ನೇಮಕಾತಿ ಪ್ರಕಟಣೆ

### DHFWS ವಿಜಯಪುರ ನೇಮಕಾತಿ 2026 ?

26 ನರ್ಸಿಂಗ್ ಆಫೀಸರ್ ಮತ್ತು ಲ್ಯಾಬೊರೇಟರಿ ಟೆಕ್ನಿಕಲ್ ಆಫೀಸರ್ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ. ಆಲೂಈಫಖ ವಿಜಯಪುರವು ನರ್ಸಿಂಗ್ ಆಫೀಸರ್ ಮತ್ತು ಲ್ಯಾಬೊರೇಟರಿ ಟೆಕ್ನಿಕಲ್ ಆಫೀಸರ್ ಹುದ್ದೆಗಳ ಭರ್ತಿಗಾಗಿ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ವಿಜಯಪುರದಲ್ಲಿ (ಕರ್ನಾಟಕ ಸರ್ಕಾರ) ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 07–ಆಗಸ್ಟ್–2026 ರೊಳಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: vijayapura.nic.in

## ಅಗ್ನಿ ಅವಘಡ ಹೊತ್ತಿ ಉರಿದ ಸಂಜನಾ ಫೋಟೋ ಸ್ಟುಡಿಯೋ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಪೋತ್ನಾಳ ಗ್ರಾಮದಲ್ಲಿರುವ ಸಂಜನಾ ಫೋಟೋ ಸ್ಟುಡಿಯೋದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಅವಘಡದಿಂದ ಬೆಂಕಿಯ ಜ್ವಾಲೆಗೆ ಸ್ಟುಡಿಯೋದಲ್ಲಿದ್ದ ಬೆಲೆ ಬಾಳುವ ಉಪಕರಣಗಳು ಬೆಂಕಿಗೆ ಸುಟ್ಟು ಆಹುತಿಯಾಗಿವೆ.**



ಅವಘಡದಲ್ಲಿ ಕ್ಯಾಮೆರಾ, ಕಂಪ್ಯೂಟರ್, ಪ್ರಿಂಟರ್ ಸೇರಿದಂತೆ ವಿವಿಧ ಫೋಟೋಗ್ರಫಿ ಮತ್ತು ಡಿಜಿಟಲ್ ಸೇವೆಗೆ ಬಳಸಲಾಗುತ್ತಿದ್ದ ಉಪಕರಣಗಳು ಸುಟ್ಟು ಕರಕಲಾಗಿದ್ದು, ಸುಮಾರು ?5 ಲಕ್ಷಕ್ಕೂ ಅಧಿಕ ಮೌಲ್ಯದ ಆಸ್ತಿ ನಷ್ಟ ಸಂಭವಿಸಿದೆ ಎಂದು ತಿಳಿದುಬಂದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ, ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿರುವ ಶಂಕೆ ವ್ಯಕ್ತವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಿ ನಷ್ಟದ ಪ್ರಮಾಣವನ್ನು ಅಂದಾಜಿಸಿದ್ದಾರೆ. ಸ್ಥಳೀಯರು ಸಂತ್ರಸ್ತರಿಗೆ ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಯಿಂದ ಸೂಕ್ತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

## ನೂತನ ಸಚಿವರ ಪ್ರಮಾಣ ವಚನ ಸಮಾರಂಭ : ಲೋಕಭವನದ ಬಳಿ ಪೊಲೀಸ್ ಬಂದೋಬಸ್ತ್

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಲೋಕಭವನದ ಗಾಜೀನ ಮನೆಯಲ್ಲಿ ನೂತನ ಸಚಿವರ ಪ್ರಮಾಣ ವಚನ ಕಾರ್ಯಕ್ರಮ ಇಂದು ಸಂಜೆ ನಡೆಯಲಿರುವ ಹಿನ್ನಲೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.ಅಧಿಕಾರಿಗಳು ಸೇರಿದಂತೆ 1 ಸಾವಿರಕ್ಕೂ ಹೆಚ್ಚು ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿದೆ.**





ಲೋಕಭವನ, ತಿಮಯ್ಯ ಸರ್ಕಲ್ ಸೇರಿದಂತೆ ಒಟ್ಟು 12 ಸೆಕ್ಟರ್‌ಗಳನ್ನು ಮಾಡಲಾಗಿದ್ದು, ಪ್ರತಿಯೊಂದು ಸೆಕ್ಟರ್‌ಗಳಲ್ಲಿ ಒಬ್ಬರು ಅಧಿಕಾರಿ ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. 12 ಮಂದಿ ಡಿಸಿಪಿಗಳು, ಒಬ್ಬರು ಹೆಚ್ಚುವರಿ ಪೊಲೀಸ್ ಆಯುಕ್ತರು, ಒಬ್ಬರು ಜಂಟಿ ಪೊಲೀಸ್ ಆಯುಕ್ತರು ಸೇರಿದಂತೆ ಎಸಿಪಿಗಳು, ಇನ್ಸ್ ಪೆಕ್ಟರ್‌ಗಳು ಬಂದೋಬಸ್ತ್‌ನಲ್ಲಿರುತ್ತಾರೆ. ಯಾವುದೇ ಸಣ್ಣಪುಟ್ಟ ಘಟನೆಗಳು ನಡೆಯದಂತೆ ಬ್ಯಾರಿಕೇಡ್‌ಗಳನ್ನು ಹಾಕಿ ಸೂಕ್ತ ಬಂದೋಬಸ್ತ್ ಮಾಡಲಾಗಿದೆ.ಈ ಕಾರ್ಯಕ್ರಮದಲ್ಲಿ ಪಾಸ್ ಇರುವವರಿಗೆ ಮಾತ್ರ ಪ್ರವೇಶವಿದೆ. ಈಗಾಗಲೇ ಪ್ರಮಾಣ ವಚನ ಸ್ವೀಕಾರ ಸಮಾರಂಭ ಮಾಹಿತಿ ತಿಳಿದ ತಕ್ಷಣ ಹಿರಿಯ ಪೊಲೀಸ್ ಅಧಿಕಾರಿಗಳು ಲೋಕಭವನಕ್ಕೆ ತೆರಳಿ ಸುತ್ತಮುತ್ತ ಪರಿಶೀಲಿಸಿ ಭದ್ರತೆ ಬಗ್ಗೆ ಸೂಕ್ತ ಮಾಹಿತಿ ನೀಡಿದ್ದಾರೆ.

# ಮಾನ್ವಿ ಕಲ್ಯಾಣ ಇಲಾಖೆ ಭ್ರಷ್ಟಾಚಾರ ಆರೋಪ: ಇಒ ನೋಟಿಸ್‌ಗೆ ಕಲ್ಯಾಣಾಧಿಕಾರಿಯಿಂದ ಇನ್ನು ಸಿಗದ ಉತ್ತರ!

ನೈಜ್ಯ ದೆಸೆ ನ್ಯೂಸ್

**ಮಾನ್ವಿ ತಾಲೂಕಿನ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳಾದ ಶ್ರೀ ಭಾಗಯ್ಯ ನಾಯಕ್ ಅವರ ವಿರುದ್ಧ ಕೇಳಿಬಂದಿರುವ ವ್ಯಾಪಕ ಭ್ರಷ್ಟಾಚಾರ ಮತ್ತು ಸಾರ್ವಜನಿಕ ಅನುದಾನ ದುರುಪಯೋಗದ ದೂರಿಗೆ ಸಂಬಂಧಿಸಿದಂತೆ, ಮಾನ್ವಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಜಾರಿ ಮಾಡಿದ್ದ ಅಧಿಕೃತ ನೋಟಿಸ್‌ಗೆ ಇಲಾಖೆಯಿಂದ ಇದುವರೆಗೂ ಯಾವುದೇ ಉತ್ತರ ಅಥವಾ ಸ್ಪಷ್ಟ ಅಭಿಪ್ರಾಯ ಸಲ್ಲಿಕೆಯಾಗಿಲ್ಲ.**

ಈ ಪ್ರಕರಣದ ಹಿನ್ನೆಲೆಯನ್ನು ನೋಡುವುದಾದರೆ, ಭೀಮಸೇನೆ ಕರ್ನಾಟಕ ವಿದ್ಯಾರ್ಥಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಪ್ರಶಾಂತ ಜಾಗೀರಪನ್ನೂರು ಅವರು ಕಳೆದ ಜುಲೈ ಏಳರಂದು ತಾಲೂಕು ಪಂಚಾಯತ್‌ಗೆ ಲಿಖಿತ ದೂರೊಂದನ್ನು ಸಲ್ಲಿಸಿದ್ದರು. ಆ ದೂರಿನಲ್ಲಿ, ತಾಲೂಕು ಕಲ್ಯಾಣ ಅಧಿಕಾರಿ ಶ್ರೀ ಭಾಗಯ್ಯ ನಾಯಕ್ ಅವರು ವಿದ್ಯಾರ್ಥಿ ನಿಲಯಗಳ ಮೆಸ್ ಬಿಲ್, ಹಾಲು ಸರಬರಾಜು, ತರಕಾರಿ–ಮೊಟ್ಟೆ ಖರೀದಿ ಹಾಗೂ ಅಡುಗೆ ಅನಿಲ ಬಿಲ್‌ಗಳಲ್ಲಿ ವಾಸ್ತವಿಕತೆಗಿಂತ ಹೆಚ್ಚಿನ ಮೊತ್ತವನ್ನು ತೋರಿಸಿ ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದಾರೆ ಎಂದು ಗಂಭೀರವಾಗಿ ಆರೋಪಿಸಲಾಗಿತ್ತು. ಅದರೊಂದಿಗೆ ಕಚೇರಿಯ ವಿದ್ಯುತ್, ನೀರಿನ ಬಿಲ್ ಹಾಗೂ ಬೆಡ್ಡಿಂಗ್ ಕಿಟ್ ಮತ್ತು ಸೋಪು–ಎಣ್ಣೆ ಭತ್ಯೆ ಬಿಲ್‌ಗಳಲ್ಲೂ ಭಾರಿ ಪ್ರಮಾಣದ ಸಾರ್ವಜನಿಕ ಹಣವನ್ನು ದುರುಪಯೋಗಪಡಿಸಿಕೊಂಡು ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿ ನಷ್ಟ ಉಂಟುಮಾಡಿದ್ದಾರೆ ಎಂದು ವಿವರಿಸಲಾಗಿತ್ತು.



ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ರಾಯಚೂರು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
ತಾಲೂಕ ಪಂಚಾಯತ ಕಾರ್ಯಾಲಯ ಮಾನವಿ

ಸಂ. ತಾ.ಪಂ.ಮಾ/ಇಲಾಖೆ/ದೂರು/2026-27/330 ದಿನಾಂಕ : 18.07.2026

ಗೆ,
ತಾಲೂಕ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು,
ಮಾನವಿ

ವಿಷಯ:- ಇಲಾಖೆ ಅಡಿಯಲ್ಲಿ ವ್ಯಾಪಕ ಭ್ರಷ್ಟಾಚಾರ ಮತ್ತು ಬಿಲ್ಲುಗಳ ಆರ್ಥಿಕ ಅವ್ಯವಹಾರವನ್ನು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ದೂರು ಸಲ್ಲಿಸಿರುವ ಕುರಿತು..

ಉಲ್ಲೇಖ:- ಶ್ರೀ ಪ್ರಶಾಂತ ಜಾಗೀರಪನ್ನೂರು ಬೀಮಸೇನ ಕರ್ನಾಟಕ ವಿದ್ಯಾರ್ಥಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಇವರ ದೂರು ಪತ್ರ ದಿನಾಂಕ : 07.07.2026

*** *** ****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ದೂರು ಪತ್ರದ ಮೂಲಕ ಶ್ರೀ ಪ್ರಶಾಂತ ಜಾಗೀರಪನ್ನೂರು ಬೀಮಸೇನ ಕರ್ನಾಟಕ ವಿದ್ಯಾರ್ಥಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಇವರು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಕಛೇರಿಯಲ್ಲಿ, ದೈನಂದಿನ ಅಗತ್ಯಗಳಿಗೆ ಬಳಕೆಯಾಗುವ ಮೆಸ್ ಬಿಲ್, ಹಾಲು ಸರಬರಾಜು ಬಿಲ್, ತರಕಾರಿ ಮೊಟ್ಟೆ ಖರೀದಿ ಬಿಲ್ ಹಾಗೂ ಅಡುಗೆ ಅನಿಲ ಬಿಲ್ ಗಳಲ್ಲಿ, ವಾಸ್ತವಕ್ಕಿಂತ ಮಿಗಿಲಾದ ಮೊತ್ತವನ್ನು ತೋರಿಸಿ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಕಛೇರಿಯ ಇನ್ನಿತರ ಮೂಲಭೂತ ಸೌಕರ್ಯಗಳಾದ ಬಿಲ್ಲುಗಳಲ್ಲಿ, ಬಾರಿ ಪ್ರಮಾಣದ ಸಾರ್ವಜನಿಕರ ಅನುದಾನ ದುರುಪಯೋಗಪಡಿಸಿಕೊಂಡಿರುತ್ತಾರೆ ಸದರಿ ಬಿಲ್ ಗಳನ್ನು ತನಿಖೆಗೆ ಒಳಪಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ಸಲ್ಲಿಸಿರುತ್ತಾರೆ.

ಸದರಿ ದೂರು ಪತ್ರದ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತ, ದೂರು ಪತ್ರದಲ್ಲಿರುವ ಅಂಶಗಳ ಬಗ್ಗೆ ಅರ್ಜಿದಾರರಿಗೆ ಹಿಂಬರಹ ನೀಡಿ ಈ ಕಛೇರಿಗೆ ಸ್ಪಷ್ಟ ಅಭಿಪ್ರಾಯ ಸಲ್ಲಿಸಲು ಸೂಚಿಸಿದೆ.

ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲೂಕ ಪಂಚಾಯತ ಮಾನವಿ

ಪ್ರತಿಯನ್ನು :
1) ಪ್ರಶಾಂತ ಜಾಗೀರಪನ್ನೂರು ವಿದ್ಯಾರ್ಥಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಸಾ|| ಜಾಗೀರಪನ್ನೂರು ಪೋ|| ಚೀಕಲಪರ್ವಿ ತಾ|| ಮಾನವಿ ಇವರಿಗೆ ಮಾಹಿತಿಗಾಗಿ ನೀಡಿದೆ.
2) ಕಛೇರಿ ಕಡತಕ್ಕೆ.

ಈ ಗಂಭೀರ ದೂರು ಪತ್ರವನ್ನು ಪರಿಶೀಲಿಸಿದ ಮಾನ್ವಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಕಳೆದ ಜುಲೈ ಹದಿನೆಂಟರಂದು ಕ್ರಮ ಕೈಗೊಂಡು ಪತ್ರ ಸಂಖ್ಯೆ: ಸಂ. ತಾ.ಪಂ.ಮಾ/ಇಲಾಖೆ/ದೂರು/2026–27/330 ರ ಮೂಲಕ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಅಧಿಕೃತ ನೋಟಿಸ್ ಜಾರಿ ಮಾಡಿದ್ದರು. ಆ ನೋಟಿಸ್‌ನಲ್ಲಿ ದೂರು ಪತ್ರದ ಪ್ರತಿಯನ್ನು ಲಗತ್ತಿಸಿ, ಅದರಲ್ಲಿರುವ ಅಂಶಗಳ ಬಗ್ಗೆ ಕಚೇರಿಗೆ ತಕ್ಷಣವೇ 'ಸ್ಪಷ್ಟ ಅಭಿಪ್ರಾಯ' ಸಲ್ಲಿಸುವಂತೆ ಹಾಗೂ ಅರ್ಜಿದಾರರಿಗೆ ನಿಯಮಾನುಸಾರ ಹಿಂಬರಹ ನೀಡುವಂತೆ ಸೂಚಿಸಲಾಗಿತ್ತು. ಆದರೆ ನೋಟಿಸ್ ಜಾರಿಯಾಗಿ ದಿನಗಳು ಕಳೆದರೂ ಕಲ್ಯಾಣಾಧಿಕಾರಿಗಳು ಇದುವರೆಗೂ ಯಾವುದೇ ಲಿಖಿತ ಉತ್ತರ ಅಥವಾ ಸ್ಪಷ್ಟನೆ ನೀಡದೆ ಮೌನ ವಹಿಸಿರುವುದು ಸಾರ್ವಜನಿಕ ವಲಯದಲ್ಲಿ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಜವಾಬ್ದಾರಿಯುತ ಅಧಿಕಾರಿಗಳ ಈ ನಿರಾಸಕ್ತಿಗೆ ಭೀಮಸೇನೆ ಕರ್ನಾಟಕ ವಿದ್ಯಾರ್ಥಿ ಘಟಕವು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ತಕ್ಷಣವೇ ಉನ್ನತ ಮಟ್ಟದ ಆಡಿಟ್ ಅಥವಾ ತಾಲೂಕು ಮಟ್ಟದ ತನಿಖಾ ಸಮಿತಿಯ ಮೂಲಕ ಸಮಗ್ರ ಮರು–ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

# ಮಾವಿನಕೆರೆ ಆಸ್ಪತ್ರೆಯಲ್ಲಿ ಎದೆ ಹಾಲಿನ ಮಹತ್ವ ಕಾರ್ಯಕ್ರಮಕ್ಕೆ ಚಾಲನೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು ಆಗಸ್ಟ್ 03 (ಕರ್ನಾಟಕ ವಾರ್ತೆ): ಮಗುವಿನಲ್ಲಿ ರೋಗ ನಿರೋಧಕ ಶಕ್ತಿಯನ್ನು ವೃದ್ಧಿಗೊಳಿಸಿ ಮಗುವಿಗೆ ಕಾಯಿಲೆಗಳು ಬರದಂತೆ ತಡೆಯುವ ಶಕ್ತಿ ತಾಯಿಯ ಎದೆ ಹಾಲಿನಲ್ಲಿದೆ ಎಂದು ರಾಯಚೂರು ತಾಲೂಕು ಪ್ರಭಾರಿ ಆರೋಗ್ಯಾಧಿಕಾರಿ ಡಾ.ಸತೀಶ್ ಅವರು ಹೇಳಿದರು.**




ಆಗಸ್ಟ್ 03ರ ಸೋಮವಾರ ದಂದು ನಗರದ ಮಾವಿನಕೆರಿಯ ಸರ್ಕಾರಿ ಆಸ್ಪತ್ರೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ, ಜಹೀರಾಬಾದ್ ಹಾಗೂ ರಾಗಿಮಾನಗಡ್ಡಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ನವೋದಯ ವೈದ್ಯಕೀಯ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನಮ್ಮ ದೇಶದ ಸಾಮಾಜಿಕ ವ್ಯವಸ್ಥೆಯು ಮಗುವಿಗೆ ಬಹು ದಿನಗಳವರೆಗೆ ಹಾಲುಣಿಸುವ ತಾಯ್ತನದ ಬಾಂಧವ್ಯವಿದೆ. ಆದರೆ ಹೆರಿಗೆಯ ತಕ್ಷಣ ರೋಗನಿರೋಧಕ ಶಕ್ತಿ ನೀಡುವ ಹಳದಿ ವರ್ಣದ ಕೊಲೆಸ್ಟ್ರಾಂ ದೊರಕುವುದರಿಂದ ನವಜಾತ ಶಿಶುವಿಗೆ ಹಾಲುಣಿಸುವುದಕ್ಕೆ ತಾಯಿಗೆ ಪಾಲಕರು, ಪೋಷಕರು ಕೈಜೊಡಿಸಬೇಕು ಎಂದರು. ಮಾವಿನಕರೆ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಅರುಣಾ ಅವರು ಮಾತನಾಡಿ, ಗರ್ಭಿಣಿಯೆಂದು ತಿಳಿದ ದಿನದಿಂದಲೇ ತಾಯಿ ನಿಯಮಿತ ತಪಾಸಣೆ, ಪೌಷ್ಟಿಕ ಆಹಾರ ಸೇವನೆ, ರಕ್ತಹೀನತೆಯಾಗದಂತೆ ಕಾಯಿಪಲ್ಯ ಸೇವನೆ ಮಾಡುವುದರಿಂದ ಹೆರಿಗೆ ಸಮಯದಲ್ಲಿ ಕನಿಷ್ಠ 2.5ಕೆಜಿ ತೂಕದೊಂದಿಗೆ ಮಗುವಿನ ಜನನಕ್ಕೆ ಸಹಾಯಕವಾಗುವುದು. ಅಲ್ಲದೆ ಮಗುವಿನ ವಯಸ್ಸು ಆರು ತಿಂಗಳು ತುಂಬುವವರೆಗೂ ಕೇವಲ ಎದೆಹಾಲನ್ನು ಮಾತ್ರ ನೀಡಬೇಕಿದೆ.

ಇದರಿಂದ ತಾಯಿ ಮತ್ತು ಮಗುವಿನ ಬಾಂಧವ್ಯ ವೃದ್ಧಿಸುವ, ರಕ್ತಸ್ರಾವ ತಡೆಯುವ, ಗರ್ಭಿಣಿ ಅವಧಿಯ ಬೊಜ್ಜು ಕರುಗಿಸುವ, ಮಹಿಳೆಗೆ ಬರಬಹುದಾದ ಸ್ತನ ಕ್ಯಾನ್ಸರ್ ದೂರಮಾಡುತ್ತದೆ ಎಂದರು. ನವೋದಯ ಮಹಾವಿದ್ಯಾಲಯದ ಮಕ್ಕಳ ತಜ್ಞ ಡಾ.ಮಹೀಜ್, ಪ್ರೊಫೇಸರ್ ಡಾ.ಹರ್ಷಿಯಾ ತರನುಮ್, ರಿಮ್ಸ್ ಮಕ್ಕಳ ವಿಭಾಗದ ಡಾ.ಶಾಲಂ ಪಾಷಾ ಹಾಗೂ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ ಮಾತನಾಡಿದರು.

ಕಾರ್ಯಕ್ರಮದಲ್ಲಿ ರಿಮ್ಸ್ ಮಕ್ಕಳ ತಜ್ಞೆ ಡಾ.ಶೀಲ್ಪಾ, ಜಹೀರಾಬಾದ್ ವೈದ್ಯಾಧಿಕಾರಿ ಡಾ.ಆಸ್ಪಾಕ್ ಹುಸೇನ್, ನವೋದಯ ಕಾಲೇಜಿನ ಪಿಎಸ್‌ಎಮ್ ವಿಭಾಗದ ಡಾ.ಲಕ್ಷ್ಮೀ, ಡಾ.ಭವಾನಿ, ಡಾ.ಭಾಗ್ಯಶ್ರೀ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಹಿರಿಯ ಹೆಚ್‌ಐಓ ಸುರೇಶ್, ಶೂಶ್ರೂಷಣಾಧಿಕಾರಿ ಅನಸೂಯಾ, ಮಮತ, ಗಿರಿಜಾ, ಎಮ್‌ಟಿಎಸ್ ಸಂಧ್ಯಾ, ಪಿಹೆಚ್‌ಸಿಓ ಮರಿಯಾರಾಣಿ, ಶಾರದಾ, ಮಹೇಶ್ವರಿ, ಮಲ್ಲೇಶ್ವರಿ, ಅನ್ನಪೂರ್ಣ, ಮಲ್ಲಮ್ಮ, ಹೆಚ್‌ಐಓ ಶೃತಿ ಸೇರಿದಂತೆ ಆಶಾ ಕಾರ್ಯಕರ್ತೆಯರು, ತಾಯಂದಿರು, ಇತರರು ಇದ್ದರು.

# ವಿದ್ಯಾರ್ಥಿಗಳಿಗೆ ಜಲ ಸಂರಕ್ಷಣೆ ಜಾಗೃತಿ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪುರಸಭೆ ತಾಳಿಕೋಟಿ ವತಿಯಿಂದ ವಿದ್ಯಾರ್ಥಿಗಳಿಗೆ ಪರಿಸರ ರಕ್ಷಣೆ, ನೈರ್ಮಲ್ಯ ಹಾಗೂ ಆರೋಗ್ಯ ಜಾಗೃತಿ ಮೂಡಿಸುವ ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಕಾರ್ಯಕ್ರಮವನ್ನು ಶನಿವಾರ ಆಯೋಜಿಸಲಾಯಿತು.**



ಕಾರ್ಯಕ್ರಮದಲ್ಲಿ ಮಳೆನೀರು ಕೊಯ್ಲು ಹಾಗೂ ಜಲ ಸಂಪನ್ಮೂಲಗಳ ರಕ್ಷಣೆಯನ್ನು ಉತ್ತೇಜಿಸುವ "Catch the Rain" ಜಲಾಂದೋಲನ ಮತ್ತು ಡಯೇರಿಯಾ (ಅತಿಸಾರ ಭೇದಿ) ತಡೆಗಟ್ಟುವಿಕೆ ಅಭಿಯಾನದ ಕುರಿತು ವಿದ್ಯಾರ್ಥಿಗಳಿಗೆ ವಿಸ್ತೃತ ಮಾಹಿತಿ ನೀಡಲಾಯಿತು. ಪುರಸಭೆ ಕಿರಿಯ ಆರೋಗ್ಯ ನಿರೀಕ್ಷಕ ಶಿವಾನಂದ ಜುಮನಾಳ ಅವರು ವಿದ್ಯಾರ್ಥಿಗಳಿಗೆ ಮಳೆ ನೀರು ಸಂಗ್ರಹಣೆ,ಸ್ವಚ್ಛತೆ, ಘನತಾಜ್ಯ ವಿಂಗಡನೆ ಮತ್ತು ಮರುಬಳಕೆ ಕುರಿತು ಪ್ರಾಯೋಗಿಕ ಮಾಹಿತಿ ನೀಡಿ ನೀರಿನಿಂದ ಹರಡುವ ರೋಗಗಳ ತಡೆ ಹಾಗೂ ಸ್ವಚ್ಛ ಪರಿಸರ ನಿರ್ಮಾಣದ ಕುರಿತು ತಿಳಿಸಿ, 2026–27 ನೇ ಸಾಲನ್ನು "ತ್ಯಾಜ್ಯ ವಿಂಗಡಣೆ ವರ್ಷ" (Year of Waste Segregation) ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ, ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿ ಮೂಲದಲ್ಲೇ ತ್ಯಾಜ್ಯ ಬೇರ್ಪಡಿಸುವ ಪ್ರಾಮುಖ್ಯತೆ ಕುರಿತು ವಿಶೇಷ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ, ಪಟ್ಟಣದ ಸ್ವಚ್ಛತೆ ಹಾಗೂ ಜಲ ಸಂರಕ್ಷಣೆಗೆ ಪ್ರತಿಜ್ಞೆ ಮಾಡಿದರು.

ಪ್ರಾಂಶುಪಾಲ ಎಸ್ ಬಿ ಸಾವಳಸಂಗ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ಸಮಯದಲ್ಲಿ ಉಪನ್ಯಾಸಕರು, ಹಾಗೂ ಕಾಲೇಜ ಸಿಬ್ಬಂದಿಗಳಾದ ಭೀಮನಗೌಡ ಚೌಧರಿ,ಸುಮಂಗಲಾ ಬಿರಾದಾರ, ಭಾಗ್ಯಶ್ರೀ ಬಡಿಗೇರ, ಭುವನೇಶ್ವರಿ ಹಿರೇಮಠ,ಅಶ್ವಿನಿ ಮಾನೆ,ಅಕ್ಷತಾ ಬಿರಾದಾರ ಹಾಗೂ ನಟರಾಜ ಮಂಕಣಿ ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ ಫಿರೋಜ ಮುಲ್ಲಾ, ಕಿರಿಯ ಆರೋಗ್ಯ ನಿರೀಕ್ಷಕ ರಂಗನಾಥ ಅಜಮನಿ, ಕಂದಾಯ ನಿರೀಕ್ಷಕ ಶರಣಗೌಡ ಪಾಟೀಲ, ಪೌರಕಾರ್ಮಿಕ ಭೀಮಣ್ಣ ಬೋಳಿ ಹಾಗೂ ವಿದ್ಯಾರ್ಥಿಗಳು ಇದ್ದರು.

# ಜಲವೇ ಜೀವನವಾಗಿದೆ: ಶಿವಾನಂದ ಜುಮನಾಳ




ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ನೀರು ಭೂಮಿಯ ಮೇಲಿನ ಅತ್ಯಂತ ಪ್ರಮುಖ ಮತ್ತು ಅಮೂಲ್ಯವಾದ ನೈಸರ್ಗಿಕ ಸಂಪನ್ಮೂಲವಾಗಿದೆ ಅದು ಎಲ್ಲಾ ಜೀವಿಗಳನ್ನು ಪೋಷಿಸುತ್ತದೆ , ಜಲವೇ ಜೀವವಾಗಿದೆ ಅದರ ರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಪುರಸಭೆ ಕಿರಿಯ ಆರೋಗ್ಯ ನಿರೀಕ್ಷಕ ಶಿವಾನಂದ ಜುಮನಾಳ ಹೇಳಿದರು.**

ಶುಕ್ರವಾರ ಪಟ್ಟಣದ ಎಸ್ ಕೆ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ ಪುರಸಭೆ ತಾಳಿಕೋಟಿ ಹಾಗೂ ಎನ್ ಸಿ ಸಿ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡ ಮಳೆ ನೀರು ಸಂಗ್ರಹಣೆ 2026 "ಕ್ಯಾಚ್ ದಿ ರೇನ್", ಘನತಾಜ್ಯ ವಸ್ತುಗಳ ನಿರ್ವಹಣೆ ಹಾಗೂ ಜಲ ಸಂರಕ್ಷಣೆ ಜಾಗೃತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಅವರು ಮಾತನಾಡಿ ಪಟ್ಟಣದ ಘನತಾಜ್ಯ ನಿರ್ವಹಣೆ ಕುರಿತು ಎಲ್ಲರೂ ತಿಳಿದುಕೊಂಡು ಪುರಸಭೆಯೊಂದಿಗೆ ಸಹಕರಿಸಬೇಕು. ನಗರದ ಸ್ವಚ್ಛತೆ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದು ತಿಳಿಸಿದ ಅವರು ಮಳೆ ನೀರು ಸಂಗ್ರಹಣೆ,

ವಿಧಾನಗಳು, ಸ್ವಚ್ಛತೆ, ಘನತಾಜ್ಯ ವಿಂಗಡನೆ ಮತ್ತು ಮರುಬಳಕೆ ಕುರಿತು ಪ್ರಾಯೋಗಿಕ ಮಾಹಿತಿಯನ್ನು ನೀಡಿ ಡಯೋರಿಯಾ (ಅತಿಸಾರ) ನಿಯಂತ್ರಣದ ಕುರಿತು ಅನುಸರಿಸಿಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತೂ ಸೂಕ್ತ ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ದಯಾನಂದ ಮುಗಡ್ಲಿಮಠ ಅವರು ಮಾತನಾಡಿ ವಿದ್ಯಾರ್ಥಿಗಳು ಪರಿಸರ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದರ ಜೊತೆಗೆ ಪರಿಸರ ಸ್ನೇಹಿ ವಸ್ತುಗಳನ್ನು ಬಳಸಬೇಕು ಮತ್ತು ಅವುಗಳ ಸರಿಯಾದ ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ಎನ್ ಸಿ ಸಿ ಅಧಿಕಾರಿ ಲೆಫ್ಟಿನೆಂಟ್ ರಾಘವೇಂದ್ರ ಮಿಸ್ಕಿನ್ ಅವರ ಸಂಯೋಜನೆಯೊಂದಿಗೆ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿಗಳು ಈ ಜಾಗೃತಿ ಅಭಿಯಾನದಲ್ಲಿ ಸಕ್ರೀಯರಾಗಿ ಭಾಗವಹಿಸಿ ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸುವ ಪ್ರತಿಜ್ಞೆ ಮಾಡಿದರು. "ನೀರು ಉಳಿಸಿ ಪ್ರಕೃತಿಯನ್ನು ಬೆಳೆಸಿ" ಎಂಬ ಸಂದೇಶದೊಂದಿಗೆ ಹಾಗೂ ಸಾಮೂಹಿಕ ಪ್ರಯತ್ನಕ್ಕೆ ಕರೆ ನೀಡುವ ಮೂಲಕ ಕಾರ್ಯಕ್ರಮ ಸಂಪನ್ನಗೊಂಡಿತು. ಕಾರ್ಯಕ್ರಮದಲ್ಲಿ ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ ಫಿರೋಜ್ ಮುಲ್ಲಾ, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಸಹಕಾರದಿಂದ ಸಂಘಗಳ ಅಭಿವೃದ್ಧಿ ಸಾಧ್ಯ:ಗುಂಡಕನಾಳ ಶ್ರೀ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದಲ್ಲಿ ಇಂದು ಸಹಕಾರಿ ಬ್ಯಾಂಕ ಹೆಮ್ಮರವಾಗಿ ಬೆಳೆದಿದೆ ಇದಕ್ಕೆ ಇಲ್ಲಿಯ ಆಡಳಿತ ಮಂಡಳಿ ನಿರ್ದೇಶಕರ ಕಾಳಜಿ, ಸಿಬ್ಬಂದಿಗಳ ಕರ್ತವ್ಯ ನಿಷ್ಠೆ ಹಾಗೂ ಸದಸ್ಯರ ವಿಶ್ವಾಸವೇ ಕಾರಣವಾಗಿದೆ ಇದನ್ನು ಕೆಡದಂತೆ ನೋಡಿಕೊಳ್ಳಿ ಎಂದು ಗುಂಡಕನಾಳ ಬ್ರಹನ್ ಮಠದ ಪರಮಪೂಜ್ಯ ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು. ಸೋಮವಾರ ಪಟ್ಟಣದ ಅಡತ್ ಅಸೋಶಿಯೇಶನ್ ಸಭಾಭವನದಲ್ಲಿ ಹಮ್ಮಿಕೊಂಡ ದಿ. ತಾಳಿಕೋಟಿ ಸಹಕಾರಿ ಬ್ಯಾಂಕ್ ನಿಯಮಿತ ಇದರ 67ನೇ ವಾರ್ಷಿಕ ಸರ್ವಸಾಧಾರಣ ಸಭೆಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.**



ವಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಿಎಸ್ ಪಾಟೀಲ್ ಯಾಳಗಿ ಅವರು ಮಾತನಾಡಿ ಹಿರಿಯರು ಬಹಳ ಕಷ್ಟಪಟ್ಟು ಈ ಸಹಕಾರಿ ಬ್ಯಾಂಕನ್ನು ಕಟ್ಟಿ ಬೆಳೆಸಿದ್ದಾರೆ ಇದರ ವರ್ಚಸ್ಸು ಕೇಳದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಲ್ಲರೂ ಒಂದಾಗಿ ಸಹಕರಿಸಿದಾಗಲೇ ಬ್ಯಾಂಕಿನ ಅಭಿವೃದ್ಧಿ ಸಾಧ್ಯವಾಗುತ್ತದೆ. ಬ್ಯಾಂಕಿನ ಸದಸ್ಯರಿಗೆ ನೀಡುವ ಮರಣೋತ್ತರ ಸಹಾಯ ನಿಧಿಯನ್ನು ರೂ.2 ಸಾವಿರದಿಂದ 5 ಸಾವಿರಕ್ಕೆ ಹೆಚ್ಚಿಸಬೇಕು ಹಾಗೂ ಒಳ್ಳೆಯ ಕ್ರೀಡಾಪಟುಗಳಿಗೆ ಕ್ರೀಡಾ ಪ್ರೋತ್ಸಾಹ ಧನವನ್ನು ನೀಡಬೇಕೆಂಬುದು ನನ್ನ ಸಲಹೆಯಾಗಿದೆ ಎಂದರು. ಬ್ಯಾಂಕಿನ ಅಧ್ಯಕ್ಷ ಕಾಶಿನಾಥ ಸಜ್ಜನ ಅವರು ಮಾತನಾಡಿ ಇವತ್ತು ನಮ್ಮ ಬ್ಯಾಂಕು 10, 676 ಸದಸ್ಯರನ್ನು, 610 ಲಕ್ಷ ಶೇರು ಬಂಡವಾಳ, 22228.14 ಲಕ್ಷ ಠೇವುಗಳು, 254.48 ದುಡಿಯುವ ಬಂಡವಾಳ ಹೊಂದಿದ್ದು 2025–26 ನೇ ಸಾಲಿನಲ್ಲಿ 457.01 ಲಕ್ಷ ಲಾಭಗಳಿಸಿದೆ ಪ್ರಸಕ್ತ ಬ್ಯಾಂಕು ಮೂರು ಶಾಖೆಗಳನ್ನು ಹೊಂದಿದ್ದು ಮೂರು ಶಾಖೆಗಳು ಉತ್ತಮ ಲಾಭವನ್ನು ಹೊಂದಿವೆ ಇದೆಲ್ಲವೂ ಬ್ಯಾಂಕಿನ ಸದಸ್ಯರ ಹಾಗೂ ಗ್ರಾಹಕರ ಸಹಕಾರದಿಂದಲೇ ಸಾಧ್ಯವಾಗಿದೆ. ಇವತ್ತು ಸಭೆಯಲ್ಲಿ ತಿಳಿಸಿದ ಸಲಹೆ ಸೂಚನೆಗಳನ್ನು ಆಡಳಿತ ಮಂಡಳಿ ನಿರ್ದೇಶಕರ ಸಭೆಯಲ್ಲಿ ಚರ್ಚಿಸಲಾಗುವುದು.



ಮುಂದೆಯೂ ಇದೇ ರೀತಿಯಾದ ವಿಶ್ವಾಸ ಮತ್ತು ಸಹಕಾರ ನಮ್ಮೊಂದಿಗೆ ಇರಲಿ ಎಂದರು. ಇದೇ ಸಂದರ್ಭದಲ್ಲಿ 2025 26 ನೇ ಸಾಲಿನಲ್ಲಿ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ಸಂಘದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕಿ ಬಿ.ಕೆ.ಮಣ್ಣೂರ ವರದಿ ವಾಚಿಸಿದರು. ಸಹಾಯಕ ವ್ಯವಸ್ಥಾಪಕಿ ಎಸ್ ಬಿ ದೇಸಾಯಿ ಸ್ವಾಗತಿಸಿದರು. ಮಿಣಜಗಿ ಶಾಖೆ ವ್ಯವಸ್ಥಾಪಕ ಆರ್ ಎಸ್ ಬಿರಾದಾರ ನಿರೂಪಿಸಿದರು. ಕುಮಾರಿ ಅಂಜಲಿ ವಿಜಯಸಿಂಗ್ ಹಜೇರಿ ಭರತನಾಟ್ಯ ಪ್ರದರ್ಶಿಸಿದರು. ಸಂಘದ ಸಾಮಾನ್ಯ ಸದಸ್ಯರಾದ ಎಸ್ ಬಿ ಕಟ್ಟಿಮನಿ, ಪ್ರಕಾಶ್ ಹಜೇರಿ ವಿಜಯಸಿಂಗ್ ಹಜೇರಿ, ಹಾಗೂ ಮಂಜುನಾಥ ಶೆಟಿ ಅವರು ಕೆಲವು ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿದರು.

ಈ ಸಮಯದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ದಶರಥಸಿಂಗ್ ಮನಗೂಳಿ, ಮುರಗೇಶ ವಿರಕ್ತಮಠ,ಅಡತ್ ಅಸೋಸಿಯೇಷನ್ ಅಧ್ಯಕ್ಷ ಅಶೋಕ ಶೆಟ್ಟಿ, ಬ್ಯಾಂಕಿನ ಉಪಾಧ್ಯಕ್ಷ ಸಿ.ಎಸ್. ಯಾಳಗಿ, ನಿರ್ದೇಶಕರುಗಳಾದ ಐ.ಬಿ.ಬಿಳೇಭಾವಿ, ಎಂ ಎಸ್ ಸರಶೆಟ್ಟಿ, ಡಿ. ಎಸ್. ಹೆಬಸೂರ, ಎಸ್. ಸಿ.ಪಾಟೀಲ, ಎ. ವಿ. ಹಜೇರಿ, ಡಿ. ಕೆ. ಪಾಟೀಲ, ಪಿ.ವಿ.ಹಜೇರಿ, ನಿರ್ದೇಶಕಿ ಜಿ.ಬಿ.ಕೊಡಗಾನೂರ,–ಎಸ್.ಬಿ. ಬಡದಾಳಿ, ನಿರ್ದೇಶಕ ಆರ್. ಬಿ. ಕಟ್ಟಿಮನಿ, ಎಸ್ ವೈ ಬರದೇನಾಳ,ನಾ. ನಿ. ಸದಸ್ಯರಾದ ಗಂಗಾಧರ ಕಸ್ತೂರಿ, ಆರ್ ಎ ಮುರಗಿ, ಜೆ. ಎ. ಕೊಡಗೆ, ಮಿಣಜಗಿ ಹಾಗೂ ಬಲಶೆಟ್ಟಿಹಾಳ ಶಾಖೆ ಸಲಹಾ ಸಮಿತಿ ಸದಸ್ಯರು, ಸಿಬ್ಬಂದಿಗಳು ಹಾಗೂ ಸದಸ್ಯರು ಉಪಸಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ತೋಟಗಾರಿಕೆ (Horticulture)

ತೋಟಗಾರಿಕೆ (Horticulture) ಎನ್ನುವುದು ಹಣ್ಣುಗಳು, ತರಕಾರಿಗಳು, ಹೂವುಗಳು, ಔಷಧೀಯ ಹಾಗೂ ಸುಗಂಧ ಸಸ್ಯಗಳ ಬೆಳವಣಿಗೆ, ನಿರ್ವಹಣೆ, ಸಂಸ್ಕರಣೆ ಮತ್ತು ಮಾರುಕಟ್ಟೆ ಕುರಿತು ವೈಜ್ಞಾನಿಕವಾಗಿ ಕಲಿಸುವ ಕೃಷಿ ವಿಜ್ಞಾನದ ಪ್ರಮುಖ ವಿಭಾಗವಾಗಿದೆ. ಈ ಕೋರ್ಸ್ ವಿದ್ಯಾರ್ಥಿಗಳಿಗೆ ಆಧುನಿಕ ಕೃಷಿ ತಂತ್ರಜ್ಞಾನ, ಸಾವಯವ ಕೃಷಿ, ಗ್ರೀನ್‌ಹೌಸ್ ತಂತ್ರಜ್ಞಾನ, ಸಸ್ಯ ಸಂರಕ್ಷಣೆ ಹಾಗೂ ಉದ್ಯಮಶೀಲತೆಯ ಕುರಿತು ಪ್ರಾಯೋಗಿಕ ಮತ್ತು ಸೈದ್ಧಾಂತಿಕ ಜ್ಞಾನವನ್ನು ನೀಡುತ್ತದೆ.

**ಪ್ರಮುಖ ತೋಟಗಾರಿಕೆ ಕೋರ್ಸ್‌ಗಳು**

1. ಬಿ.ಎಸ್ಸಿ ತೋಟಗಾರಿಕೆ (B.Sc Horticulture)
- ಅವಧಿ: 4 ವರ್ಷಗಳು
- ಅರ್ಹತೆ: ಪಿಯುಸಿ (ವಿಜ್ಞಾನ ವಿಭಾಗ ? ಪಿಸಿಎಂಬಿ/ಪಿಸಿ–ಎಂ/ಪಿಸಿಬಿ)
- ಪ್ರಮುಖ ವಿಷಯಗಳು:
  - ಹಣ್ಣು ಬೆಳೆ ವಿಜ್ಞಾನ (Pomology)
  - ತರಕಾರಿ ಬೆಳೆ ವಿಜ್ಞಾನ (Olericulture)
  - ಹೂಗಾರಿಕೆ (Floriculture)
  - ಔಷಧೀಯ ಮತ್ತು ಸುಗಂಧ ಸಸ್ಯಗಳು
  - ಸಸ್ಯ ಸಂರಕ್ಷಣೆ
  - ಮಣ್ಣು ವಿಜ್ಞಾನ
  - ತೋಟಗಾರಿಕಾ ಎಂಜಿನಿಯರಿಂಗ್
  - ಬೆಳೆ ಕೊಯ್ಲಿನ ನಂತರದ ತಂತ್ರಜ್ಞಾನ (Post-Harvest Technology)
  - ಉದ್ಯಮಶೀಲತೆ ಮತ್ತು ಕೃಷಿ ಮಾರುಕಟ್ಟೆ

2. ಎಂ.ಎಸ್ಸಿ ತೋಟಗಾರಿಕೆ (M.Sc Horticulture)
- ಅವಧಿ: 2 ವರ್ಷಗಳು
- ಅರ್ಹತೆ: ಬಿ.ಎಸ್ಸಿ ತೋಟಗಾರಿಕೆ ಅಥವಾ ಸಂಬಂಧಿತ ಕೃಷಿ ಪದವಿ
- ವಿಶೇಷ ವಿಭಾಗಗಳು:
  - ಹಣ್ಣು ಬೆಳೆ ವಿಜ್ಞಾನ
  - ತರಕಾರಿ ಬೆಳೆ ವಿಜ್ಞಾನ
  - ಹೂಗಾರಿಕೆ ಮತ್ತು ಲ್ಯಾಂಡ್‌ಸ್ಕೇಪಿಂಗ್
  - ಸಸ್ಯೋತ್ಪತ್ತಿ ಮತ್ತು ತಳಿವರ್ಧನೆ
  - ಔಷಧೀಯ ಮತ್ತು ಸುಗಂಧ ಸಸ್ಯಗಳು
  - ಪೋಸ್ಟ್ ಹಾರ್ವೆಸ್ಟ್ ತಂತ್ರಜ್ಞಾನ

3. ಡಿಪ್ಲೊಮಾ ಇನ್ ತೋಟಗಾರಿಕÉ (Diploma in Horticulture)
- ಅವಧಿ: 2 ವರ್ಷಗಳು
- ಅರ್ಹತೆ: ಎಸ್.ಎಸ್.ಎಲ್.ಸಿ ಅಥವಾ ಪಿಯುಸಿ
- ಕಲಿಯುವ ವಿಷಯಗಳು:
  - ಮೂಲಭೂತ ತೋಟಗಾರಿಕೆ
  - ನರ್ಸರಿ ನಿರ್ವಹಣೆ
  - ಸಾವಯವ ಕೃಷಿ
  - ನೀರಾವರಿ ವಿಧಾನಗಳು
  - ಸಸ್ಯ ಸಂರಕ್ಷಣೆ
  - ಸಣ್ಣ ಉದ್ಯಮ ಆರಂಭಿಸುವ ವಿಧಾನಗಳು

ಕೋರ್ಸ್‌ನಲ್ಲಿ ಕಲಿಯುವ ಕೌಶಲ್ಯಗಳು
- ಆಧುನಿಕ ತೋಟಗಾರಿಕಾ ತಂತ್ರಜ್ಞಾನ
- ಡ್ರಿಪ್ ಮತ್ತು ಸ್ಪ್ರಿಂಕ್ಲರ್ ನೀರಾವರಿ ವ್ಯವಸ್ಥೆ
- ಗ್ರೀನ್‌ಹೌಸ್ ಮತ್ತು ಪಾಲಿಹೌಸ್ ನಿರ್ವಹಣೆ
- ಗ್ರಾಫ್ಟಿಂಗ್, ಬಡಿಂಗ್ ಮತ್ತು ಸಸ್ಯ ಪ್ರಸರಣ
- ರೋಗ ಮತ್ತು ಕೀಟ ನಿರ್ವಹಣೆ
- ಬೆಳೆ ಗುಣಮಟ್ಟ ಮತ್ತು ಉತ್ಪಾದನೆ ಹೆಚ್ಚಿಸುವ ವಿಧಾನಗಳು
- ಕೃಷಿ ಉದ್ಯಮಶೀಲತೆ ಹಾಗೂ ಮಾರುಕಟ್ಟೆ ನಿರ್ವಹಣೆ

ಉದ್ಯೋಗಾವಕಾಶಗಳು
- ರಾಜ್ಯ ಮತ್ತು ಕೇಂದ್ರ ಸರ್ಕಾರದ ತೋಟಗಾರಿಕೆ ಇಲಾಖೆಗಳು
- ಕೃಷಿ ವಿಜ್ಞಾನ ಕೇಂದ್ರಗಳು (ಏಗಿಏ)
- ನರ್ಸರಿ ಮತ್ತು ಗ್ರೀನ್‌ಹೌಸ್ ನಿರ್ವಹಣೆ
- ಬೀಜ ಮತ್ತು ರಸಗೊಬ್ಬರ ಕಂಪನಿಗಳು
- ಹಣ್ಣು ಹಾಗೂ ತರಕಾರಿ ಸಂಸ್ಕರಣಾ ಉದ್ಯಮಗಳು
- ಹೂಗಾರಿಕೆ ಮತ್ತು ಲ್ಯಾಂಡ್‌ಸ್ಕೇಪ್ ಸಂಸ್ಥೆಗಳು
- ಕೃಷಿ ಸಂಶೋಧನಾ ಸಂಸ್ಥೆಗಳು
- ಕೃಷಿ ಸಲಹೆಗಾರ (Agricultural Consultant)
- ಕೃಷಿ ಅಧಿಕಾರಿ
- ತೋಟಗಾರಿಕೆ ಅಭಿವೃದ್ಧಿ ಅಧಿಕಾರಿ
- ಗುಣಮಟ್ಟ ನಿಯಂತ್ರಣ ಅಧಿಕಾರಿ
- ಉಪನ್ಯಾಸಕ ಮತ್ತು ಸಂಶೋಧನಾ ಸಹಾಯಕ
- ಸ್ವಂತ ನರ್ಸರಿ, ಹೂಗಾರಿಕೆ ಅಥವಾ ಹಣ್ಣು ತೋಟ ಆರಂಭಿಸುವ ಅವಕಾಶ

ಉನ್ನತ ಶಿಕ್ಷಣ
- ಎಂ.ಎಸ್ಸಿ (ತೋಟಗಾರಿಕೆ)
- ಪಿಎಚ್.ಡಿ. (ತೋಟಗಾರಿಕೆ)
- ಪೋಸ್ಟ್–ಡಾಕ್ಟರಲ್ ಸಂಶೋಧನೆ
- ಕೃಷಿ ನಿರ್ವಹಣೆ (MBA Agribusiness)
- ಆಹಾರ ಸಂಸ್ಕರಣೆ ಮತ್ತು ಕೃಷಿ ತಂತ್ರಜ್ಞಾನದಲ್ಲಿ ವಿಶೇಷ ಕೋರ್ಸ್‌ಗಳು

ಪ್ರಮುಖ ಶಿಕ್ಷಣ ಸಂಸ್ಥೆಗಳು (ಕರ್ನಾಟಕ)
- ಯೂನಿವರ್ಸಿಟಿ ಆಫ್ ಹಾರ್ಟಿಕಲ್ಚರಲ್ ಸೈನ್ಸಸ್, ಬಾಗಲಕೋಟೆ
- ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್, ಬೆಂಗಳೂರು
- ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್, ಧಾರವಾಡ
- ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

ಭವಿಷ್ಯದ ಅವಕಾಶಗಳು

ತೋಟಗಾರಿಕೆ ಕ್ಷೇತ್ರವು ಭಾರತದಲ್ಲಿ ವೇಗವಾಗಿ ಬೆಳೆಯುತ್ತಿರುವ ವಲಯಗಳಲ್ಲಿ ಒಂದಾಗಿದೆ. ಸಾವಯವ ಕೃಷಿ, ರಫ್ತು ಗುಣಮಟ್ಟದ ಹಣ್ಣು ಮತ್ತು ತರಕಾರಿ ಉತ್ಪಾದನೆ, ಹೂಗಾರಿಕೆ, ಗ್ರೀನ್‌ಹೌಸ್ ಕೃಷಿ ಹಾಗೂ ಕೃಷಿ ಉದ್ಯಮಗಳ ವಿಸ್ತರಣೆಯಿಂದ ಈ ಕ್ಷೇತ್ರದಲ್ಲಿ ಉತ್ತಮ ಉದ್ಯೋಗ ಮತ್ತು ಸ್ವಯಂ ಉದ್ಯೋಗದ ಅವಕಾಶಗಳು ಲಭ್ಯವಿವೆ.

ತೋಟಗಾರಿಕೆ ಕೋರ್ಸ್ ಪ್ರಕೃತಿಯೊಂದಿಗೆ ಕೆಲಸ ಮಾಡಲು ಆಸಕ್ತಿ ಹೊಂದಿರುವ, ಕೃಷಿ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನ ಬಳಸಲು ಬಯಸುವ ಮತ್ತು ಸ್ವಂತ ಉದ್ಯಮ ಆರಂಭಿಸುವ ಕನಸು ಹೊಂದಿರುವ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಆಯ್ಕೆಯಾಗಿದೆ.

# ಅಣು ಬೋಧನೆ ಕಾರ್ಯಾಗಾರ ಉದ್ಘಾಟನೆ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಪಟ್ಟಣದ ವೀರಶೈವ ವಿದ್ಯಾವರ್ಧಕ ಸಂಘ, ವತಿಯಿಂದ ನಡೆಸಲ್ಪಡುವ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯ (ಬಿ.ಎಡ್.)ದ ಆಂತರಿಕ ಗುಣಮಟ್ಟ ಭರವಸೆ ಘಟಕ (IQAC)ದ ಆಶ್ರಯದಲ್ಲಿ ಆಯೋಜಿಸಲಾದ ಅಣು ಬೋಧನೆ (Micro Teaching) ಕಾರ್ಯಾಗಾರದ ಉದ್ಘಾಟನಾ ಸಮಾರಂಭ ಸೋಮವಾರ ವಿರಕ್ತಶ್ರೀ ಸಭಾಭವನದಲ್ಲಿ ಯಶಸ್ವಿಯಾಗಿ ನಡೆಯಿತು.**

ಕಾರ್ಯಕ್ರಮವನ್ನು ವಿ.ವಿ. ಸಂಘದ ವೈಸ್ ಛೇರ್ಮನ್ನರು ಹಾಗೂ ಎಸ್.ಕೆ.ಶಿಕ್ಷಣ ಮಹಾವಿದ್ಯಾಲಯದ ಚೇರಮನ್ನರಾದ ಕಾಶಿನಾಥ ಎಸ್. ಮುರಾಳ ಅವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮುದ್ದೇಬಿಹಾಳದ ಎಂ.ಜಿ.ವಿ.ಸಿ. ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಸಿ. ಎಸ್. ಬಂಡಾರಗಲ್ ಅವರು ವೃತ್ತಿಪರ ನೈತಿಕತೆ ಹಾಗೂ ಶಿಕ್ಷಕರ ವೃತ್ತಿಪರ ಮೌಲ್ಯಗಳು ಕುರಿತು ಸವಿಸ್ತಾರವಾಗಿ ಉಪನ್ಯಾಸ ನೀಡಿ, ಉತ್ತಮ ಶಿಕ್ಷಕರು ಜ್ಞಾನವನ್ನು ಬೋಧಿಸುವುದರ ಜೊತೆಗೆ ಸಮಾಜಕ್ಕೆ ಆದ–




’ರ್ಶ ವ್ಯಕ್ತಿತ್ವವನ್ನು ರೂಪಿಸುವ ಜವಾಬ್ದಾರಿಯನ್ನು ಹೊಂದಿರಬೇಕು ಎಂದು ತಿಳಿಸಿದರು. ಇನ್ನೋರ್ವ ಮುಖ್ಯ ಅತಿಥಿಗಳಾದ ಪ್ರೊ. ಬಿ. ಎನ್. ಬೋಳಿಶೆಟ್ಟಿ ಅವರು ಪಾಠ ಪರಿಚಯಿಸುವ ಕೌಶಲ್ಯ’ (Skill of Introducing the Leason) ಕುರಿತು ಪ್ರಾಯೋಗಿಕ ಮಾದರಿ ಪಾಠವನ್ನು ಪ್ರದರ್ಶಿಸಿದರು. ಪಾಠದ ಪರಿಣಾಮಕಾರಿ ಆರಂಭ, ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಜಾಗೃತಿಗೊಳಿಸುವ ವಿಧಾನಗಳು, ಕುತೂಹಲ ಮೂಡಿಸುವಿಕೆ, ಬೋಧನಾ ಸಾಮಗ್ರಿಗಳ ಸಮರ್ಪಕ ಬಳಕೆ ಹಾಗೂ ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯನ್ನು ಹೆಚ್ಚಿಸುವ ತಂತ್ರಗಳನ್ನು ಪ್ರಾಯೋಗಿಕವಾಗಿ ವಿವರಿಸಿ ಪ್ರಶಿಕ್ಷಣಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಆರ್. ಎಂ. ಬಂಟನೂರ ವಹಿಸಿದ್ದರು. ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಅವರು, ಅಣು ಬೋಧನೆಯು ಶಿಕ್ಷಕರಲ್ಲಿ ಬೋಧನಾ ಕೌಶಲ್ಯಗಳನ್ನು ಪರಿಪೂರ್ಣಗೊಳಿಸುವ ಪರಿಣಾಮಕಾರಿ ತರಬೇತಿ ವಿಧಾನವಾಗಿದ್ದು, ಆತ್ಮವಿಶ್ವಾಸ, ತರಗತಿ ನಿರ್ವಹಣಾ ಸಾಮರ್ಥ್ಯ ಬೆಳೆಸುತ್ತದೆ.ಕಾರ್ಯಾಗಾರದಲ್ಲಿ ಕಲಿತ ಕೌಶಲ್ಯಗಳನ್ನು ಪ್ರತಿಯೊಬ್ಬ ಪ್ರಶಿಕ್ಷಣಾರ್ಥಿಯು ತಮ್ಮ ಬೋಧನಾ ಅಭ್ಯಾಸದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ವೇದಿಕೆಯಲ್ಲಿ IQAC ಸಂಯೋಜಕರಾದ ಪ್ರೊ. ಯು. ಎನ್. ಮಂಗೊಂಡ ಉಪಸ್ಥಿತರಿದ್ದರು.

ಪ್ರಾಸ್ತಾವಿಕ ಹಾಗೂ ಕಾರ್ಯಾಗಾರದ ಉದ್ದೇಶವನ್ನು ಪ್ರೊ. ಎ. ಎ. ಗಂಗನಗೌಡರ ಅವರು ವಿವರಿಸಿದರು. ಶರಣಮ್ಮ ಹಾಗೂ ಸಂಗಡಿಗರ ಪ್ರಾರ್ಥನಾ ಗೀತೆಯೊಂದಿಗೆ ಆರಂಭಗೊಂಡಿತು. ಸಾವಿತ್ರಿ ಅವರು ಆಗಮಿಸಿದ ಗಣ್ಯರನ್ನು ಸ್ವಾಗತಿಸಿ ಪರಿಚಯಿಸಿದರು. ಭಾಗ್ಯ ಅವರು ಅತಿಥಿಗಳಿಗೆ ಪುಷ್ಪಾರ್ಪಣೆ ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಅನ್ನಪೂರ್ಣೇಶ್ವರಿ ನಿರ್ವಹಿಸಿದರು. ವಂದನಾರ್ಪಣೆಯನ್ನು ಮಧು ನಾಡಗೌಡರ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಉಪನ್ಯಾಸಕರು, ಸಿಬ್ಬಂದಿ ಹಾಗೂ ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು.

# ‘ಹೂಗಾರ’ ಚಲನಚಿತ್ರದ ಡಬ್ಬಿಂಗ್ ಮುಕ್ತಾಯ

**ನೈಜ್ಯ ದೆಸೆ ನ್ಯೂಸ್**

**ಬೆಂಗಳೂರು: ಕೀರ್ತನ ಮೂವ್ವಿ ಮೇಕರ್ಸ್ ಹಾಗೂ ಕೆ ಆರ್ ಎಸ್ ಪ್ರೊಡಕ್ಷನ್ ಬೆಂಗಳೂರ ಇವರ ಡಾ.ಶಿವಕುಮಾರಸ್ವಾಮಿಜಿಯವರ ಆಶೀರ್ವಾದದೊಂದಿಗೆ ನಿರ್ಮಿಸಲಾದ ‘ಹೂಗಾರ’ ಕನ್ನಡ ಚಲನಚಿತ್ರದ ಡಬ್ಬಿಂಗ್ ಹಂತದ ಕಾರ್ಯ ಮುಕ್ತಾಯವಾಗಿದೆ.**

ಬಾಗಲಕೋಟ ಜಿಲ್ಲೆಯ ಇಲಕಲ್ ತಾಲೂಕಿನ ಸಿದ್ದನಕೊಳ್ಳಮಠ ಹಾಗೂ ಸಿದ್ದನಕೊಳ್ಳ ಗ್ರಾಮದ ಸುತ್ತಮುತ್ತ ಪ್ರದೇಶದಲ್ಲಿ ಮೂವತ್ತು ದಿನಗಳ ಕಾಲ ಚಿತ್ರೀಕರಣ ನಡೆಸಿ, ಉತ್ತರ ಕರ್ನಾಟಕದ ಭಾಷೆಯ ಜೊತೆಗೆ ಉತ್ತರ ಕರ್ನಾಟಕದ ಕಲಾವಿದರಿಗೂ, ಅವಕಾಶವನ್ನು ನೀಡಲಾಗಿದೆ. ಶ್ರೀಮಠದ ಪೀಠಾಧಿಪತಿಗಳಾದ ಡಾ.ಶಿವಕುಮಾರ ಸ್ವಾಮೀಜಿ ಅವರು ಚಿತ್ರದ ಹಾಡಿನಲ್ಲಿ ಅಭಿನಯಿಸಿದ್ದು ವಿಶೇಷವಾಗಿದೆ. "ಇದು ಕೇವಲ




ಒಂದು ಕಂಬವಲ್ಲ? ಇದು ಕರ್ನಾಟಕದ ಆತ್ಮ. ಇದು ಶಕ್ತಿ, ಶಿಸ್ತು ಮತ್ತು ಸಾಧನೆಯ ಪ್ರತೀಕ." ಎಂದು ನಿರ್ದೇಶಕ ಲೋಕೇಶ ಹೇಳುತ್ತಾರೆ.

ತಾರಾ ಬಳಗದಲ್ಲಿ ಲೋಕೇಶ್ ವಿದ್ಯಾಧರ , ಸುನಂದಾ ಕಲ್ಬುರ್ಗಿ ,ಕಾಮಿಡಿ ಕಿಲಾಡಿಗಳು ಖ್ಯಾತಿಯ ದಾನಪ್ಪ , ಮಾಂತೇಶ್ ಹಳ್ಳೂರ, ಮಾ. ತೇಜಸ್ ಶಿವರಾಜ್ , ಸಂತೋಷ್ , ಕಿರಣ್ ಹೂಗಾರ , ಅಪೂರ್ವ , ಮುತ್ತುರಾಜ್ ಬುದ್ನಿ , ಕಿಟ್ಟಿ ತಾಳಿಕೋಟೆ ,ಕುಮಾರ್ ಬಾಬು, ಸತೀಶ್ ಶೆಟ್ಟಿ , ಮಂಜುಳಾ ಅರಸ್, ಭಾವನ ಶಿಂಧೆ , ವಿದ್ಯಾ ಗಂಜಿಹಾಳ ,ದಶರಥ, ಮೊದಲಾದವರಿದ್ದಾರೆ.

ಮಲ್ಲಕಂಬ ಸಜ್ಜುಗೊಳಿಸಿದವರು ಜೈ ಕರ್ನಾಟಕ ಮಲ್ಲಕಂಬ ತಂಡದ ಸಿದ್ಧಾರೂಢ ಹೂಗಾರ ಮತ್ತು ತಂಡದ ಯುವಕರು, ಮಲ್ಲಕಂಬ ವ್ಯವಸ್ಥೆ ದೀಪಾ ಆರ್. ಶಿವರಾಜ್, ಸ್ಥಾಪನೆ ಹನುಮಂತು, ಕಂಬ ನಿರ್ಮಾಣ ಮತ್ತು ಮೆರಗು ಮುತ್ತುರಾಜ್, ಧ್ವನಿ ಮತ್ತು ಉತ್ಸಾಹ ಎಸ್. ಕೆ. ಶಾಮ್ (ರಿದಂ ಕುಟ್ಟಿ), ಅಖಾಡ ಸಿದ್ಧತೆ ಸುನಂದಾ ಕಲ್ಬುರ್ಗಿ , ಪತ್ರಿಕಾ ಸಂಪರ್ಕ ಡಾ. ಪ್ರಭು ಗಂಜಿಹಾಳ, ಡಾ. ವೀರೇಶ್ ಹಂಡಿಗಿ , ನೃತ್ಯ ನಾಗರಾಜ್ , ಸಾಹಿತ್ಯ ಲೋಕೇಶ್ ವಿದ್ಯಾಧರ್, ಶಿವರಾಜ್, ಕಿನ್ನಾಳ ರಾಜ್, ಈಗಾಗಲೇ ‘ಒಬ್ಬಟ್ಟು’ ಚಿತ್ರ ನಿರ್ದೇಶಿಸಿ ನಿರ್ಮಿಸಿದ್ದ ಲೋಕೇಶ್ ವಿದ್ಯಾಧರ್ ಕಥೆ–ಚಿತ್ರಕಥೆ–ನಿರ್ದೇಶನ ಮಾಡಿದ್ದಾರೆ. ಚಿತ್ರದ ಟ್ರೈಲರನ್ನು ಶೀಘ್ರದಲ್ಲೇ ಗದಗ ನಗರದಲ್ಲಿ ಬಿಡುಗಡೆ ಮಾಡಲಿದ್ದು ಕೀರ್ತನ ಮೂವ್ವಿ ಮೇಕರ್ಸ್ ಹಾಗೂ ಕೆ ಆರ್ ಎಸ್ ಪ್ರೊಡಕ್ಷನ್ ಅವರು ಚಿತ್ರದ ನಿರ್ಮಾಪಕರಾಗಿದ್ದಾರೆ.

# ಸಂಪುಟ ವಿಸ್ತರಣೆ ಕುರಿತ ನಾಟಕೀಯ ಬೆಳವಣಿಗೆ : ಬ್ಲಾಕ್‌ಮೇಲ್‌ಗೆ ಮಣಿದ ‘ಕೈ’ಕಮಾಂಡ್

**ನೈಜ್ಯ ದೆಸೆ ನ್ಯೂಸ್**

**ಬೆಂಗಳೂರು: ಸಚಿವ ಸಂಪುಟ ವಿಸ್ತರಣೆ ಕುರಿತ ನಿರ್ಧಾರಗಳಲ್ಲಿ ಕೆಲ ನಾಟಕೀಯ ಬೆಳವಣಿಗೆಗಳಾಗಿದ್ದು, ಸಚಿವ ಸ್ಥಾನ ನೀಡದೇ ಇದ್ದರೆ ಕುಟುಂಬ ಸಮೇತ ರಾಜೀನಾಮೆ ನೀಡುವುದಾಗಿ ಎಸ್.ಎಸ್.ಮಲ್ಲಿಕಾರ್ಜುನ ಅವರ ಬ್ಲಾಕ್‌ಮೇಲ್‌ಗೆ ಕಾಂಗ್ರೆಸ್ ಹೈಕಮಾಂಡ್ ಮಣಿದಿದೆ.**

ಮೊದಲ ಪಟ್ಟಿಯಲ್ಲಿ ಹೆಸರು ಪ್ರಕಟಗೊಂಡಿದ್ದ ಉತ್ತರ ಕನ್ನಡ ಜಿಲ್ಲೆಯ ಮಂಕಾಳ ಸುಬ್ಬವೈದ್ಯ ಕೊನೆ ಕ್ಷಣದಲ್ಲಾದ ಬದಲಾವಣೆಯಿಂದ ಅವಕಾಶ ಕಳೆದುಕೊಂಡಿದ್ದಾರೆ. ಇದರಿಂದ ದುಗುಡಗೊಂಡು ಮುಖ್ಯಮಂತ್ರಿ



ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಲು ಆಗಮಿಸಿದರು. ಆದರೆ ಕಾರ್ಯದೊತ್ತಡದ ನೆಪದಲ್ಲಿ ಮುಖ್ಯಮಂತ್ರಿಯವರು ಮಂಕಾಳ ವೈದ್ಯ ಅವರನ್ನು ಭೇಟಿಯಾಗಿಲ್ಲ ಎಂದು ಹೇಳಲಾಗಿದೆ.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಂಕಾಳ ವೈದ್ಯ ತಮಗೆ ಇನ್ನೂ ಯಾವುದೇ ಖಚಿತ ಮಾಹಿತಿ ಇಲ್ಲ. ಮುಖ್ಯಮಂತ್ರಿಯವರು ಭೇಟಿಗೆ ಸಿಕ್ಕಿಲ್ಲ, ಮತ್ತೊಮ್ಮೆ ಬರುತ್ತೇನೆ. ನಾನು ಮಾತನಾಡುವ ವ್ಯಕ್ತಿಯಲ್ಲ. ಕೆಲಸ ಮಾಡುವ ಜನ ಎಂದು ಹೇಳಿ ತೆರಳಿದ್ದಾರೆ.

ರಾಜೀನಾಮೆ ಒತ್ತಡ: ಲಿಂಗಾಯತ ವೀರಶೈವ ಸಮುದಾಯದ ಪ್ರಭಾವಿ ಮುಖಂಡರಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ಪುತ್ರರಾಗಿರುವ ಎಸ್.ಎಸ್. ಮಲ್ಲಿಕಾರ್ಜುನ್, ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿದ್ದರು. ಆದರೆ ಮೊದಲ ಹಂತದ ಸಂಪುಟ ರಚನೆಯಲ್ಲಿ ಮಲ್ಲಿಕಾರ್ಜುನ ಅವರನ್ನು ಕೈಬಿಡಲಾಗಿತ್ತು. ವಿಸ್ತರಣೆಯಲ್ಲಿ ಅವಕಾಶ ತಪ್ಪಿದ್ದರೆ ಕುಟುಂಬ ಸಮೇತ ಕಾಂಗ್ರೆಸ್‌ಗೆ ರಾಜೀನಾಮೆ ನೀಡುವುದಾಗಿ ಮಲ್ಲಿಕಾರ್ಜುನ್ ಬೆದರಿಕೆ ಹಾಕಿದ್ದರು ಎನ್ನಲಾಗಿದೆ.

ಮಲ್ಲಿಕಾರ್ಜುನ್ ದಾವಣಗೆರೆ ಉತ್ತರದಿಂದ ಶಾಸಕರಾಗಿದ್ದರೆ, ದಾವಣಗೆರೆ ದಕ್ಷಿಣದಿಂದ ಅವರ ಪುತ್ರ ಸಮರ್ಥ ಶಾಮನೂರು ಇತ್ತೀಚೆಗೆ ಉಪಚುನಾವಣೆಯಲ್ಲಿ ಗೆದ್ದು ಶಾಸಕರಾಗಿದ್ದಾರೆ. ಮಲ್ಲಿಕಾರ್ಜುನ ಅವರ ಪತ್ನಿ ಡಾ.ಪ್ರಭಾ ದಾವಣಗೆರೆಯಿಂದ ಸಂಸದರಾಗಿದ್ದಾರೆ. ಒಂದೇ ಕುಟುಂಬಕ್ಕೆ ಸೇರಿದವರಿಗೆ ಎಲ್ಲಾ ಸ್ಥಾನಗಳು ದೊರೆತ್ತಿದ್ದು, ಕುಟುಂಬ ರಾಜಕಾರಣಕ್ಕೆ ಕಾಂಗ್ರೆಸ್ ಪಕ್ಷ ಮಿತಿಮೀರಿದ ಒತ್ತು ನೀಡುತ್ತಿದೆ ಎಂಬ ಆರೋಪಗಳು ಕೇಳಿ ಬಂದಿವೆ. ರಾಜಕೀಯ ಹಿನ್ನಲೆಯಿಲ್ಲದೆ ಮಂಕಾಳ ವೈದ್ಯ ಕೊನೆ ಕ್ಷಣದಲ್ಲಿ ಬಲಿಪಶುವಾಗಿದ್ದಾರೆ.

# 48 ಸಾವಿರ ರೂ. ಮೌಲ್ಯದ ಅಕ್ರಮ ಪಡಿತರ ಅಕ್ಕಿ ವಶ



**ನೈಜ್ಯ ದೆಸೆ ನ್ಯೂಸ್**

**ಅಫಜಲಪುರ: ಸರ್ಕಾರದಪಡಿತರಯೋಜನೆಯಡಿ ವಿತರಿಸಲಾದ ಅಕ್ಕಿಯನ್ನು ಕಡಿಮೆ ಬೆಲೆಗೆ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಮಹಾರಾಷ್ಟ್ರಕ್ಕೆ ಅಕ್ರಮವಾಗಿ ಸಾಗಿಸುತ್ತಿದ್ದ ವೇಳೆ ಆಹಾರ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ 48,250 ರೂ. ಮೌಲ್ಯದ ಪಡಿತರ ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ.**

ಅಫಜಲಪುರ ತಾಲೂಕಿನ ದೇವಲ ಗಾಣಗಾಪುರ ಚವಡಾಪುರ ಮಾರ್ಗವಾಗಿ ಮಹಾರಾಷ್ಟ್ರದ ಧೂದನಿ ಕಡೆಗೆ ಅಕ್ರಮವಾಗಿ ಅಕ್ಕಿ ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ತಹಶೀಲ್ದಾರ್ ಸಂಜೀವಕುಮಾರ ದಾಸ ಅವರ ನಿರ್ದೇಶನದಂತೆ ಆಹಾರ ನಿರೀಕ್ಷಕ ಮಹ್ಮದ್ ಶೋಹೇಬ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಯಿತು.

ದೇವಲ ಗಾಣಗಾಪುರ?ಚವಡಾಪುರ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಹೊಸ ರಾಜ್ಯ ಹೆದ್ದಾರಿಯಲ್ಲಿ ಕ್ರೂಜರ್ ವಾಹನವನ್ನು ತಡೆದು ಪರಿಶೀಲಿಸಿದಾಗ, ವಾಹನದಲ್ಲಿ 34.30 ಕ್ವಿಂಟಲ್ ಪಡಿತರ ಅಕ್ಕಿ ಪತ್ತೆಯಾಯಿತು. ವಶಪಡಿಸಿಕೊಂಡ ಅಕ್ಕಿಯ ಅಂದಾಜು ಮೌಲ್ಯ 48,250 ರೂ. ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವ ಉದ್ದೇಶದಿಂದ ಮಹಾರಾಷ್ಟ್ರಕ್ಕೆ ಸಾಗಿಸಲಾಗುತ್ತಿತ್ತು ಎಂಬ ಆರೋಪದ ಹಿನ್ನೆಲೆಯಲ್ಲಿ ಹೇರೂರ (ಬಿ) ಗ್ರಾಮದ ಹುಲಕಂಠರಾಯ ಸಾಲೂಂಕೆ ವಿರುದ್ಧ ದೇವಲ ಗಾಣಗಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಪೊಲೀಸ್ ಸಿಬ್ಬಂದಿಗಳಾದ ಆನಂದ ಸ್ವಾಮಿ, ಅಣ್ಣಪ್ಪ ಹಾಗೂ ನಿಂಗಪ್ಪ ಭಾಗವಹಿಸಿದ್ದರು.

# ರೈಲು ಹಳಿಗಳ ಮೇಲೆ ಬೈಕ್ ಚಲಾಯಿಸಿದ ಯುವಕರ ವಿರುದ್ಧ RPF ಕ್ರಮ ಇಬ್ಬರು ಬಾಲಕರು ಜುವೆನೈಲ್ ಬೋರ್ಡ್‌ಗೆ ಹಾಜರು

**ನೈಜ್ಯ ದೆಸೆ ನ್ಯೂಸ್**

**ಭಾಲ್ಕಿ: ಭಾಲ್ಕಿ ರೈಲು ನಿಲ್ದಾಣದ ಸಮೀಪ ರೈಲು ಹಳಿಗಳ ಮೇಲೆ ಬೈಕ್ ಚಲಾಯಿಸಿ ಅಪಾಯಕಾರಿ ಸಾಹಸ ಪ್ರದರ್ಶಿಸಿದ ಇಬ್ಬರು ಬಾಲಕರ ವಿರುದ್ಧ ರೈಲ್ವೆ ರಕ್ಷಣಾ ಪಡೆ (ಖಕಈ) ಕ್ರಮ ಕೈಗೊಂಡಿದೆ.**

ಜುಲೈ 30, 2026 ರಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ವಿಡಿಯೋದಲ್ಲಿ ಏಂ–39–ಏ–3960 ಸಂಖ್ಯೆಯ ಮೋಟಾರ್‌ಸೈಕಲ್ ಅನ್ನು ರೈಲು ಹಳಿಗಳ ಮೇಲೆ ಚಲಾಯಿಸುತ್ತಿರುವ



ದೃಶ್ಯ ಕಂಡುಬಂದಿತ್ತು. ಈ ಘಟನೆ ರೈಲು ಸಂಚಾರಕ್ಕೆ ಅಪಾಯ ಉಂಟುಮಾಡುವ ಸಾಧ್ಯತೆ ಇದ್ದ ಹಿನ್ನೆಲೆಯಲ್ಲಿ ಖಕಈ ತನಿಖೆ ನಡೆಸಿ ಆರೋಪಿಗಳನ್ನು ಪತ್ತೆಹಚ್ಚಿತು. ತನಿಖೆಯಲ್ಲಿ ಇಬ್ಬರೂ ಅಪ್ರಾಪ್ತ ವಯಸ್ಸಿನ ಬಾಲಕರು ಎಂಬುದು ಬೆಳಕಿಗೆ ಬಂದಿದ್ದು, ಅವರ ವಿರುದ್ಧ ರೈಲ್ವೆ ಕಾಯ್ದೆಯ ಸೆಕ್ಷನ್ 147, 153 ಹಾಗೂ 174(ಸಿ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಬಳಿಕ ಅವರನ್ನು ಬೀದರ್‌ನ ಜುವೆನೈಲ್ ಜಸ್ಟಿಸ್ ಬೋರ್ಡ್ (JJB) ಮುಂದೆ ಹಾಜರುಪಡಿಸಲಾಯಿತು. ಖಕಈ ಅಧಿಕಾರಿಗಳು ಸಾರ್ವಜನಿಕರಿಗೆ ರೈಲು ಹಳಿಗಳ ಮೇಲೆ ನಡೆಯುವುದು, ವಾಹನ ಚಲಾಯಿಸುವುದು ಅಥವಾ ಸೆಲ್ಫಿ ಹಾಗೂ ವಿಡಿಯೋಗಳಿಗಾಗಿ ಅಪಾಯಕಾರಿ ಸಾಹಸಗಳಲ್ಲಿ ತೊಡಗುವುದು ಕಾನೂನುಬಾಹಿರವಾಗಿದ್ದು, ಜೀವಕ್ಕೆ ಅಪಾಯಕಾರಿಯಾಗಿದೆ ಎಂದು ಎಚ್ಚರಿಕೆ ನೀಡಿದ್ದಾರೆ. ಪ್ರಸಕ್ತ ವರ್ಷದಲ್ಲಿ ಮಾತ್ರ ರೈಲು ಹಳಿಗಳ ಮೇಲೆ ಅತಿಕ್ರಮಣ ಮತ್ತು ಅಪಾಯಕಾರಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ 657 ಪ್ರಕರಣಗಳನ್ನು ದಾಖಲಿಸಿ 3,28,500 ದಂಡ ವಸೂಲಿ ಮಾಡಲಾಗಿದೆ ಎಂದು ಖಕಈ ಪ್ರಕಟಣೆಯಲ್ಲಿ ತಿಳಿಸಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101